# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.

ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ

60,000 Plus readers

NEWSPAPER AD- THE BEST ADVERTISING PLATFORM TO BOOST YOUR BUSINESS

94486 33038

hampitimes@gmail.com Valmiki Circle, Hosapete-583201



ಸಂಪುಟ:01 • ಸಂಚಿಕೆ:309 • ನೋಂದಣಿ ನಂ.:KARKAN27911 • ವಿಜಯನಗರ • 09.05.2024 • ಗುರುವಾರ • ಪುಟ:04 • ಬೆಲೆ:2

Volume:01 • Issue:309 • Reg.No:KARKAN27911 • VIJAYANAGARA • 09.05.2024 • Thursday • Page:04 • Rs:2


ಬಳ್ಳಾರಿ ಆರ್‌ವೈಎಂಸಿ ಕಾಲೇಜಿನಲ್ಲಿ ಡಿಸಿ ಮಿಶ್ರಾ, ವೀಕ್ಷಕ ಸಖಮುರಿ ಸಮ್ಮುಖದಲ್ಲಿ 22 ಸ್ಟ್ರಾಂಗ್ ರೂಂ. ಬಾಗಿಲಿಗೆ ಬೀಗ–ಮೊಹರು

# ಮತಯಂತ್ರಗಳ ಭದ್ರತೆಗೆ ಬಂದೋಬಸ್ತ್


## ಜೂ.4ರಂದು ಬಳ್ಳಾರಿಯಲ್ಲಿ ಮತ ಎಣಿಕೆ। ಫಲಿತಾಂಶದತ್ತ ಎಲ್ಲರ ಚಿತ್ತ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಲೋಕಸಭಾ ಚುನಾವಣೆ ನಿಮಿತ್ಯ ಮೇ. 07 ರಂದು ಮತದಾನ ಪ್ರಕ್ರಿಯೆ ಬಹುತೇಕ ಶಾಂತಿಯುತವಾಗಿ ಜರುಗಿದ್ದು, ಅಭ್ಯರ್ಥಿಗಳ ಭವಿಷ್ಯ ಮತಯಂತ್ರಗಳಲ್ಲಿ ಭದ್ರವಾಗಿದೆ. ಮತಯಂತ್ರಗಳು ಬಳ್ಳಾರಿ ನಗರದ ರಾವ್ ಬಹದ್ದೂರು ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯ (ಆರ್‌ವೈಎಂಸಿ) ಕಟ್ಟಡದಲ್ಲಿ ವಿಶೇಷವಾಗಿ ನಿರ್ಮಿಸಿರುವ ಸ್ಟ್ರಾಂಗ್ ರೂಂಗಳಲ್ಲಿ ಇರಿಸಿ, ಕಟ್ಟಡಕ್ಕೆ ಪೊಲೀಸ್ ಬಿಗಿ ಬಂದೋಬಸ್ತ್ ಹಾಕಲಾಗಿದೆ.

ಬುಧವಾರದಂದು ಆರ್‌ವೈಎಂಸಿ ಕಾಲೇಜು ಕಟ್ಟಡದಲ್ಲಿ ಜಿಲ್ಲಾಧಿಕಾರಿ, ಚುನಾವಣಾ ಸಾಮಾನ್ಯ ವೀಕ್ಷಕರು, ಅಭ್ಯರ್ಥಿಗಳು ಹಾಗೂ ಅಭ್ಯರ್ಥಿಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಮತಯಂತ್ರಗಳ ಸ್ಟ್ರಾಂಗ್ ರೂಂ. ಬಾಗಿಲಿಗೆ ಬೀಗ ಹಾಕಿ ಮೊಹರು ಹಾಕಲಾಯಿತು, ಜೊತೆಗೆ ಬಾಗಿಲನ್ನು ದಪ್ಪ ಹಲಗೆಯ ಮೂಲಕ ಸಂಪೂರ್ಣ ಮುಚ್ಚಿ ಸೀಲ್ ಮಾಡಲಾಯಿತು.





ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ನಗರದ ಆರ್‌ವೈಎಂಸಿ ಕಾಲೇಜು ಕಟ್ಟಡ ಆವರಣದಲ್ಲಿ ಮಾಧ್ಯಮದವರಿಗೆ ಮಾಹಿತಿ ನೀಡಿ, ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಮೇ. 07 ರಂದು ಸುಗಮವಾಗಿ ಶಾಂತಿಯುತವಾಗಿ ಜರುಗಿದೆ. ಈ ಬಾರಿ ಶೇ. 73.92 ರಷ್ಟು ಮತದಾನವಾಗಿದ್ದು, ಕ್ಷೇತ್ರ ವ್ಯಾಪ್ತಿಯ ಕಂಪ್ಲಿ, ಬಳ್ಳಾರಿ, ಬಳ್ಳಾರಿ ನಗರ, ಸಂಡೂರು, ಹಡಗಲಿ, ಹಗರಿಬೊಮ್ಮನಹಳ್ಳಿ, ವಿಜಯನಗರ ಹಾಗೂ ಕೂಡ್ಲಿಗಿ ವಿಧಾನಸಭಾ ಕ್ಷೇತ್ರಗಳಲ್ಲಿ ದಾಖಲಾದ ಇವಿಎಂ, ವಿವಿ ಪ್ಯಾಟ್ ಮತಯಂತ್ರಗಳನ್ನು ಕಾಲೇಜು ಕಟ್ಟಡದಲ್ಲಿ ಡಿಮಸ್ಟರಿಂಗ್ ಮಾಡಿಕೊಳ್ಳಲಾಗಿದೆ.

ಮತಯಂತ್ರಗಳನ್ನು ಇರಿಸಲು ಕಾಲೇಜು ಕಟ್ಟಡದಲ್ಲಿ ವಿಶೇಷ ವ್ಯವಸ್ಥೆ ಮಾಡಿ ನೆಲಮಹಡಿ, ಮೊದಲನೆ ಮಹಡಿ ಹಾಗೂ ಮೂರನೆ ಮಹಡಿಗಳಲ್ಲಿ ಸ್ಟ್ರಾಂಗ್ ರೂಂ ಗಳನ್ನು ನಿರ್ಮಿಸಿ, ಒಪ್ಪವಾಗಿ ಜೋಡಿಸಿಡಲಾಗಿದೆ. ಸ್ಟ್ರಾಂಗ್ ರೂಂ. ಗಳನ್ನು ಚುನಾವಣೆಯ ಸಾಮಾನ್ಯ ವೀಕ್ಷಕರಾದ ಚಂದ್ರಶೇಖರ್ ಸಖಮುರಿ ಅಲ್ಲದೆ ಅಭ್ಯರ್ಥಿಗಳು ಹಾಗೂ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಸ್ಟ್ರಾಂಗ್ ರೂಂ ಗಳನ್ನು ಸೀಲಿಂಗ್ ಮಾಡಲಾಗಿದೆ. ಕಟ್ಟಡದಲ್ಲಿ ಮತಯಂತ್ರಗಳನ್ನು ಇರಿಸಲು ಒಟ್ಟು 20 ಸ್ಟ್ರಾಂಗ್ ರೂಂ ಗಳು, ಪೋಸ್ಟಲ್ ಬ್ಯಾಲೆಟ್‌ಗಳನ್ನು ಇರಿಸಲು 02 ಸ್ಟ್ರಾಂಗ್ ರೂಂ ಗಳನ್ನು ಮಾಡಲಾಗಿದೆ ಎಂದರು.

ಜೂ. 04 ರಂದು ಮತಗಳ ಎಣಿಕಾ ಕೇಂದ್ರ ಇದೇ ಕಾಲೇಜು ಕಟ್ಟಡದಲ್ಲಿ ಜರುಗಲಿದ್ದು, ಇದಕ್ಕಾಗಿ 08 ಮತ ಎಣಿಕಾ ಕೊಠಡಿಗಳನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಲಾಗಿದೆ. ಪ್ರತಿ ಎಣಿಕಾ ಕೊಠಡಿಯಲ್ಲಿ 14 ಟೇಬಲ್‌ಗಳನ್ನು ಹಾಕ ಲಾಗುತ್ತಿದ್ದು, ಮತಗಟ್ಟೆಗಳ ಸಂಖ್ಯೆಗೆ ಅನುಗುಣವಾಗಿ ಮತ ಎಣಿಕೆ ಸುತ್ತುಗಳು ನಿರ್ಧಾರವಾಗಲಿವೆ. ಜಿಲ್ಲೆಯಲ್ಲಿನ ಶಾಂತಿಯುತ ಮತದಾನಕ್ಕೆ ಸಹಕರಿಸಿದ ಎಲ್ಲರೂ ಅಭಿನಂದನಾರ್ಹರು ಎಂದರು.


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ಮಾತನಾಡಿ, ಜಿಲ್ಲೆಯಲ್ಲಿ ಬಹುತೇಕ ಶಾಂತಿಯುತ ಮತದಾನವಾಗಿದೆ. ಮತ ಎಣಿಕಾ ಕೇಂದ್ರ ಕಟ್ಟಡಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಸಿಆರ್‌ಪಿಎಫ್, ಕೆಎಸ್‌ಆರ್‌ಪಿ, ಸಿವಿಲ್ ಪೊಲೀಸ್, ಡಿವೈಎಸ್‌ಪಿ, ಇನ್ಸ್‌ಪೆಕ್ಟರ್ ಹಂತಗಳ ಅಧಿಕಾರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅಧಿಕಾರಿ, ಸಿಬ್ಬಂದಿಯು ದಿನದ 24 ಗಂಟೆ ಕಟ್ಟಡಕ್ಕೆ ಬಿಗಿ ಭದ್ರತೆ ನೀಡಲಿದ್ದು, ಶಿಫ್ಟ್ ಆಧಾರದಲ್ಲಿ ಅಧಿಕಾರಿ, ಸಿಬ್ಬಂದಿ ಭದ್ರತಾ ಕಾರ್ಯ ನಿರ್ವಹಿಸಲಿದ್ದಾರೆ ಎಂದರು.



ಚುನಾವಣಾ ಸಾಮಾನ್ಯ ವೀಕ್ಷಕ ಚಂದ್ರಶೇಖರ ಸಖಮುರಿ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿ ,ಕಾರಿಗಳಾದ ನವೀನ್ ಕುಮಾರ್ ಹಾಗೂ ರವಿ ಕುಮಾರ್ ಸೇರಿ ದಂತೆ ವಿವಿಧ ಅಧಿಕಾರಿ ಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಇಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ

■ ಹಂಪಿ ಟೈಮ್ಸ್ ಹೊಸಪೇಟೆ:




ಮಾರ್ಚ್/ಏಪ್ರಿಲ್ 2024ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1 ಮಾ.25ರಿಂದ ಏ.6ವರೆ ನಡೆಸಲಾಗಿದ್ದು, ಎಲ್ಲಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ಮುಕ್ತಾಯಗೊಂಡಿರುತ್ತದೆ. ಮೇ 9 ರಂದು ಬೆಳಿಗ್ಗೆ 10.30ಕ್ಕೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ಮಾಪನ ನಿರ್ಣಯ ಮಂಡಳಿ, ಮಲ್ಲೇಶ್ವರಂ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಂತರ ಫಲಿತಾಂಶವನ್ನು http://karresults.nic.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ ಎಂದು ಮಂಡಲಿ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಗಜ್ಯೋತಿ ಬಸವೇಶ್ವರ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾಡಳಿತ, ಜಿ.ಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮೇ 10ರಂದು ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಹಾಗೂ ಶಿವಶರಣೆ ಶ್ರೀ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಚರಿಸಲಾಗುತ್ತದೆ. ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸರಳವಾಗಿ ಆಚರಿಸಲಾಗುವುದು. ಕಾರ್ಯಕ್ರಮಕ್ಕೆ ಜಿಲ್ಲಾಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಆಗಮಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


TAFE
ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)



RRR GROUP
99801 27607
73533 06719

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
contact for more information
91082 26938
90368 65666
Near Honda Showroom, Hosapete-583201

House For Sale



3 BHK independent Duplex House with Built Area 2300 sq.ft. in an extent of 1500 sq.ft. for Sale at Rajeev Nagar, 2nd Cross, Hospet (adjacent KSSIDC Industrial Estate)
94409 86570


www.hampitimes.com


S.M.Traders & Services

Atlas Copco

Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications



- SMALL COMPRESSORS
- MEDIUM COMPRESSORS
- LARGE COMPRESSORS
- ELECTRIC COMPRESSORS
- HOSEPIPE
- HAND-HELD TOOLS(JACKHAMMERS)
- DUST COLLECTORS
- DE-WATERING PUMPS
- SERVICE KIT & SPARE PARTS
- TAPER/IDS DRILL RODS

10% BETTER EFFICIENCY | EASY TO OPERATE | LOW SERVICE COST
LIGHTER | 0 TO 50° C | SERVICE EFFICIENCY
EXTENDED SERVICE INTERVALS | HEAVY DUTY AIR FILTER | HIGH RESELL VALUE

Grow Your Business With Us

9686663125 - 9686663132 - 9686413132

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

## ಬೆಳಕಿನ ಹಾದಿ

# ಶ್ರೀಮಂತ ತಂದೆ ಮತ್ತು ಬುದ್ಧಿವಂತ ಮಗ

ಆರ್.ಬಿ.ಗುರುಬಸವರಾಜ

ಒಮ್ಮೆ ಒಬ್ಬ ಶ್ರೀಮಂತ ವ್ಯಕ್ತಿ ತನ್ನ ಮಗನನ್ನು ದೇಶ ಸಂಚಾರಕ್ಕೆ ಕರೆದೊಯ್ದನು. ಬಡವರು ಹೇಗೆ ಬದುಕುತ್ತಾರೆ ಎಂಬುದನ್ನು ಮಗನಿಗೆ ತೋರಿಸುವುದು ಮತ್ತು ನಮ್ಮ ಶ್ರೀಮಂತಿಕೆಯನ್ನು ಮಗ ಪ್ರಶಂಸಿಸುತ್ತಾನೆ ಎಂಬುದು ತಂದೆಯ ಅವರ ಆಶಯವಾಗಿತ್ತು.



ದೇಶ ಸಂಚಾರದಲ್ಲಿ ಅವರು ಒಂದು ಸಣ್ಣ ಹಳ್ಳಿಯನ್ನು ತಲುಪಿದರು. ಅಲ್ಲಿ ಬಡ ಕುಟುಂಬದೊಂದಿಗೆ ಒಂದೆರಡು ದಿನ ಕಳೆದರು. ಪ್ರವಾಸ ಮುಗಿಸಿಕೊಂಡು ಮನೆಗೆ ಹೋಗುತ್ತಿರುವಾಗ ತಂದೆ ಮಗನನ್ನು 'ಪ್ರವಾಸ ಹೇಗಿತ್ತು?' ಎಂದು ಕೇಳಿದರು.

ಮಗ ಉತ್ಸಾಹದಿಂದ ಉತ್ತರಿಸಿದ. "ಇದು ಅದ್ಭುತ ಪ್ರವಾಸ!". ಮುಂದುವರೆದು ತಂದೆ 'ಬಡವರು ಹೇಗೆ ಬದುಕುತ್ತಾರೆ ಎಂಬುದನ್ನು ನೀನು ಗಮನಿಸಿದೆಯಾ? ನಾವು ಸಂಪತ್ತಿನಿಂದ ಎಷ್ಟು ಅದೃಷ್ಟವಂತರು ಎಂದು ನಿನಗೆ ಅರ್ಥವಾಗುವಂತೆ ಮಾಡುವುದು ಪ್ರಯಾಣದ ಉದ್ದೇಶವಾಗಿತ್ತು' ಎಂದರು.

"ಹೌದು! ಗಮನಿಸಿದೆ" ಎಂದು ಮಗ ನಗುತ್ತಾ ಹೇಳಿದ. 'ಹಾಗಾದರೆ, ಪ್ರವಾಸದಿಂದ ನೀನು ಏನು ಕಲಿತಿದ್ದಿ ಹೇಳು?' ಎಂದರು ತಂದೆ.

ಅದಕ್ಕೆ ಮಗ ಹೀಗೆ ಉತ್ತರಿಸಿದ. 'ಅಪ್ಪಾ, ಅವರು ಹೇಗೆ ಬದುಕುತ್ತಾರೆ ಎಂಬುದರ ಕುರಿತು ನಾನು ಬಹಳಷ್ಟು ವಿಷಯಗಳನ್ನು ಗಮನಿಸುತ್ತೇನೆ. ನಮ್ಮಲ್ಲಿ ಒಂದು ನಾಯಿ ಇದೆ, ಆದರೆ ಅವರಲ್ಲಿ ನಾಲ್ಕಾರು ನಾಯಿಗಳಿವೆ. ನಮ್ಮ ಮನೆಯಲ್ಲಿ ಈಜು ಕೊಳವಿದೆ, ಆದರೆ ಅವರಿಗೆ ಕೊನೆಯಿಲ್ಲದ ನದಿ ಇದೆ. ನಮ್ಮ ಮನೆಗೆ ನಾವು ಅಲಂಕಾರಿಕ ವಿದ್ಯುತ್ ದೀಪಗಳನ್ನು ಹಾಕಿಸಿದ್ದೇವೆ, ಆದರೆ ಅವರು ರಾತ್ರಿಯಲ್ಲಿ ಲೆಕ್ಕವಿಲ್ಲದ ನಕ್ಷತ್ರಗಳನ್ನು ನೋಡುತ್ತಾರೆ. ನಮ್ಮ ಮನೆಯ ಕಾಂಪೌಂಡ್‌ನಲ್ಲಿ ದೊಡ್ಡ ಅಂಗಳವಿದೆ, ಆದರೆ ಅಂಗಳ ದಿಗಂತದವರೆಗೂ ಹರಡಿದೆ' ಎಂದು ಹೇಳುತ್ತಲೇ ಇದ್ದ. ತಂದೆಗೆ ಮಗನ ಉತ್ತರ ಅರ್ಥವಾಗಲಿಲ್ಲ. ಆದರೂ ಮಗ ತನ್ನ ಅನಿಸಿಕೆಯನ್ನು ಮುಂದುವರೆಸಿದ್ದ. 'ನಾವು ಆಹಾರ ಪದಾರ್ಥಗಳನ್ನು ಖರೀದಿಸುತ್ತೇವೆ, ಆದರೆ ಅವರು ಅದನ್ನು ಬೆಳೆಯುತ್ತಾರೆ. ನಮ್ಮ ಮನೆ ರಕ್ಷಿಸಲು ಸುತ್ತಲೂ ಕಾಂಪೌಂಡ್ ಇದೆ, ಜಮೀನು ರಕ್ಷಿಸಲು ಮುಳ್ಳು ಬೇಲಿಗಳಿವೆ, ಆದರೆ ಅವರನ್ನು ರಕ್ಷಿಸಲು ಅವರಿಗೆ ಸ್ನೇಹಿತರಿದ್ದಾರೆ. ನಾವು ನಮ್ಮ ಬಿಡುವಿನ ವೇಳೆಯನ್ನು ಟಿವಿ ಮತ್ತು ಫೋನ್‌ಗಳೊಂದಿಗೆ ಕಳೆಯುತ್ತೇವೆ, ಆದರೆ ಅವರು ತಮ್ಮ ಬಿಡುವಿನ ವೇಳೆಯನ್ನು ಕುಟುಂಬ ಮತ್ತು ಸ್ನೇಹಿತರೊಂದಿಗೆ ಕಳೆಯುತ್ತಾರೆ' ಎಂದು ತನ್ನ ಪ್ರವಾಸದ ಅನುಭವಗಳನ್ನು ತಂದೆಯೊಂದಿಗೆ ಹಂಚಿಕೊಂಡ.



ಕೊನೆಯದಾಗಿ 'ನಾವು ಎಷ್ಟು ಬಡವರು ಎಂದು ನನಗೆ ತೋರಿಸಿದ್ದಕ್ಕಾಗಿ ಧನ್ಯವಾದಗಳು ಅಪ್ಪ' ಎಂದನು. ಈಗ ನಿಜವಾಗಲೂ ತಂದೆ ಕಕ್ಕಾಬಿಕ್ಕಿಯಾದನು. ಏಕೆಂದರೆ ತಾನು ತನ್ನ ಶ್ರೀಮಂತಿಕೆಯ ಪ್ರತಿಷ್ಠೆಯನ್ನು ಮಗನಿಗೆ ತೋರಿಸಬೇಕು ಅಂದುಕೊಂಡಿದ್ದ. ಆದರೆ ಮಗನ ಗಮನಿಸುವಿಕೆ, ಅವನ ಆಲೋಚನೆಗಳು ಮತ್ತು ವಿಚಾರಗಳು ಬೇರೆನೇ ಇದ್ದವು.

ಹಣದಿಂದ ಸಾಂತ್ವನ ನೀಡುವ ಅನೇಕ ವಸ್ತುಗಳನ್ನು ಖರೀದಿಸಬಹುದಾದರೂ, ಪ್ರೀತಿ, ದಯೆ, ಸಹಾನುಭೂತಿ, ಸ್ನೇಹ, ಮೌಲ್ಯಗಳು ಅಥವಾ ಕುಟುಂಬದಂತಹ ನೆಮ್ಮದಿಯ ಅಂಶಗಳನ್ನು ಖರೀದಿಸಲು ಸಾಧ್ಯವಿಲ್ಲ. ಅಲ್ಲವೇ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಮಳೆಬರುವ ಕಾಲಕ್ಕ..

ಮಳೆ ಬರುವ ಕಾಲಕ್ಕ ಒಳಗ್ಯಾಕ ಕುಂತೇವು ಇಳೆಯೊಳಗೆ ಜಳಕವಾಡೋಣ ನಾವೂನೂ ಮೋಡಗಳ ಆಟ ನೋಡೋಣ' ಎಂಬ ಕವಿವಾಣಿ ನನಗೆ ಸದಾ ಪ್ರಿಯ. ಇದನ್ನು ಬಾಳಿನುದ್ದಕ್ಕೂ ಪಾಲಿಸಿಕೊಂಡೂ ಬಂದಿರುವೆ. ಸಪ್ತಸಾಗರದಾಚೆ ಉಪ್ಪುನೀರು ಆವಿಯಾಗಿ ಮೋಡಗಟ್ಟಿ, ಗಾಳಿಯಲ್ಲಿ ಪಯಣಿಸುತ್ತ ಬಂದು ಮನೆಯಂಗಳದಲ್ಲಿ ಸುರಿದು ಹೋಗುವುದು ನನಗೆ ಪವಾಡದಂತೆ ತೋರುತ್ತದೆ. ಪರ್ವತಗಳಲ್ಲಿ ಹುಟ್ಟಿದ ಹೊಳೆ ಊರಿಗೆ ಬಂದಂತೆ, ಎಲ್ಲೋ ಹುಟ್ಟಿದ ಗಂಡುಹೆಣ್ಣು ಸಂಗಾತಿಗಳಾದಂತೆ ಆಪ್ತವೆನಿಸುತ್ತದೆ. ಎಳವೆಯಲ್ಲಿ ನಾವು ಮೊದಲ ಮಳೆಗೆ ಅಂಗಳಕ್ಕಿಳಿದು ತಕತಕಿಸುತ್ತಿದ್ದೆವು; ಸೂರನೀರಿಗೆ ಕೈಯೊಡ್ಡಿ ಜಗುಲಿಯಲ್ಲಿ ನಿಲ್ಲುತ್ತಿದ್ದೆವು. ಒಳಗಿಂದ ಅಮ್ಮ 'ರೇ' ಎಂದು ಆವಾಜ್ ಹಾಕುತ್ತಿದ್ದಳು. ಸಿಡಿಲು ಬಡಿಯಬಾರದೆಂದು ಕುಡುಗೋಲನ್ನು ಅಂಗಳಕ್ಕೆಸೆದು, ನಮ್ಮನ್ನು ಒಳಗೆಳೆದುಕೊಂಡು ಬಾಗಿಲು ಮುಚ್ಚುತ್ತಿದ್ದಳು. ಅಮ್ಮನ ಛಾರ್ಜನ್ನೀಗ ಬಾನು ವಹಿಸಿಕೊಂಡಿದ್ದಾಳೆ. ಬಾಂದಳದಲ್ಲಿ ಮೋಡಕವಿದು ನೋಟಿಸು ಬರುತ್ತಿದ್ದಂತೆ, ಇವಳ ಗುಡುಗು ಸಿಡಿಲು ಶುರು. ದಂಡು ಬಂದಾಗ ಊರು ಗಾಬರಿಸುವಂತೆ, ತಲ್ಲಣದಿಂದ ಓಡಾಡುತ್ತ ಕಿಟಕಿ ಮುಚ್ಚುವ, ಟಿವಿ–ಫ್ರಿಜ್ಜುಗಳ ವಿದ್ಯುತ್ ಸಂಪರ್ಕ ಕಳೆವ, ಒಣಹಾಕಿದ ಬಟ್ಟೆ ಒಳತರುವ ಗಡಿಬಿಡಿ. ನಾನು ಬೇಕಾಬಿಟ್ಟಿ ಕಿಟಕಿಗಳನ್ನು ತೆರೆದಿಡುವೆನಂತೆ. ಗಾಳಿಬೆಳಕು ಒಳಬರಲೆಂದೇ ಅವನ್ನು ಇಡಿಸಿರುವಾಗ ಸದಾ ಮುಚ್ಚಿಡುವುದೇಕೆ ಎಂದು ನನ್ನ ಪ್ರಶ್ನೆ. 'ಧೂಳು ಗುಡಿಸು ಗೊತ್ತಾಗುತ್ತೆ' ಎಂದು ಬಾಯ್ಮುಚ್ಚಿಸುತ್ತಾಳೆ.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ

ತುಸುಹೊತ್ತು ಬಡಬಡಿಸುವ ಕದ–ಕಿಟಕಿ ಮುಚ್ಚುತ್ತ ಸಭ್ಯ ಗೃಹಸ್ಥನ ನಟನೆ ಮಾಡುತ್ತೇನೆ. ಬಳಿಕ ಉಪ್ಪರಿಗೆ ಕಿಟಕಿ ಹಾಕುವ ನೆಪದಲ್ಲಿ ನುಸುಳಿ ಮೇಲೇರುತ್ತೇನೆ. ಅಲ್ಲಿಂದ ಆಗಸದ ಹಲಗೆಯ ಮೇಲೆ ಬೆಳಕಿನ ಬಳಪದಲ್ಲಿ ಸಿಡಿಲುಗಳ ಗೀಚಾಟವನ್ನು, ಮೋಡಗಳ ತೆರೆಯೊಳಗಿಂದ ಕಣ್ಣುಮಿಟುಕಿಸುವ ಮಿಂಚಾಟವನ್ನು, ಗುಡುಗಿನ ನಗಾರಿಯ ಬಡಿತವನ್ನು ಚೆನ್ನಾಗಿ ಗಮನಿಸಬಹುದು. ಮನೆಯೆದುರಿನ ಅಶೋಕ ಸುಂಯ್‌ಗಾಳಿಗೆ ನಮಾಜು ಮಾಡುತ್ತಿದೆ; ಗಾಳಿ ಗೆಲ್ಲುಗಳನ್ನು ಮುರಿದೊಗೆಯುತ್ತ ಕಥಕ್ಕಳಿ ಯಾಡುತ್ತಿದೆ; ಸರಿಯದಿದ್ದರೆ ಬಡಿದೇನು ಎಂಬಂತೆ ಇರಿಸಲು ಬಾರಿಸುತ್ತಿದೆ. ಜನಪದರ ಪ್ರಕಾರ, ದೇವತೆಗಳ ಜಳಕವೇ ಮಳೆ ಯಂತೆ. ಪಾತ್ರೆ ಬೆಳಗಾಟವೇ ಮಿಂಚಂತೆ, ಕೈತಪ್ಪಿಬಿದ್ದ ಗಂಗಾಳವೇ ಗುಡುಗಂತೆ. ಪುರಾಣದ ಇಂದ್ರ ವರುಣರಿಗೆ ಹೋಲಿಸಿದರೆ, ಸುರ ಲೋಕದಲ್ಲೂ ತಮ್ಮ ಪಡಿಪಾಡಲನ್ನೇ ಕಾಣುವ ಈ ಕಲ್ಪನೆ ವಿಶಿಷ್ಟವಾಗಿದೆ.

ತುಸು ಹೊತ್ತಲ್ಲೇ ಗುಡುಗು ಸಿಡಿಲು ಗಾಳಿಗಳ ರುದ್ರನಾಟಕದ ಪ್ರಥಮ ಅಂಕ ಮುಗಿಯುತ್ತದೆ. ನೆತ್ತಿಯ ಮೇಲೆ ಕೆರೆಯಂಥ ಕಾರ್ಮೋಡರಂಗಪ್ರವೇಶಿಸಿ,ಶೃತಿಹಿಡಿದಂತೆಸುರಿಯಲಾರಂಭಿಸುತ್ತದೆ. ಸುತ್ತ ಮರ ಬೆಳೆದು ಜಲಕೇಳಿಗೆ ಏಕಾಂತ ಒದಗಿಸಿರುವ ಟೆರೇಸಿನ ಚಿರಾಪುಂಜಿಗೆ ಇಳಿಯುತ್ತೇನೆ. ಮೊದಲ ತುಂತುರಿಗೆ ತನು ಕಂಪಿಸುತ್ತದೆ. ಸೂಜಿಹನಿಗಳು ಚುಚ್ಚಿ ನವಿರೆಬ್ಬಿಸುತ್ತವೆ. 'ನೀರೊಳಗಿರ್ದುಂ ಬೆಮರ್ತ' ಸುಯೋಧನನಂತೆ ಮೈಗಾವೇರುತ್ತದೆ. ಕ್ರಮೇಣ ತಂಪಿಗೊಡ್ಡಿಕೊಂಡು ಜಲದ ಹಿತಾಲಿಂಗನಕ್ಕೆ ತಯಾರಾಗುತ್ತದೆ. ತಲೆಗೂದಲಿಂದ ತೊಟ್ಟಿಕ್ಕಿದ ನೀರು, ಎದೆಯ ಮೇಲೆ ಬಿದ್ದು ನಾಭಿ ಮೂಲಕ ಮೊಣಕಾಲುಗಳಿಗೆ ಹರಿದು ಪಾದಕ್ಕಿಳಿಯುತ್ತದೆ. ಶರವರ್ಷಕ್ಕೆ ಮೈಯೊಡ್ಡಿ ಅಂಗಾತ ಮಲಗುತ್ತೇನೆ. ಮುಗಿಲ್ಲಮ್ಮನ ಎದೆಹಾಲಿನಂತಹ ಹನಿಗಳು ಬಾಯೊಳಗೆ ಬೀಳುವಾಗ ಗುಟುಕರಿಸುತ್ತೇನೆ. ಚಕ್ಕಲಬಕ್ಕಲ ಹಾಕಿ ಧ್ಯಾನಕ್ಕೆ ಕೂರುತ್ತೇನೆ. ಮನಸ್ಸು ನಿರಾಳಕ್ಕೆ ಹೋಗಿ ಮಳೆಸುಖವನ್ನು ತುಂಬಿಕೊಳ್ಳುತ್ತದೆ. ಹೀಗೆ ಜಲಸಮಾಧಿಯಲ್ಲಿರುವಾಗ ಕೆಳಗಿನಿಂದ 'ಏ! ನೆನೀಬ್ಯಾಡಾ' ಎಂಬ ಅಲಾರಾಂ ಬಾರಿಸಿ, ನನ್ನ ಕೋಡಂಗಿಯಾಟಕ್ಕೆ ತೆರೆ ಎಳೆಯುತ್ತದೆ. ನನ್ನ ನೆಗಡಿಯ ದುಷ್ಪರಿಣಾಮಗಳ ಚಿಂತೆ ಬಾನುಗೆ. ನಾನು ಸೊರಸೊರ ಮೂಗೆಳೆಯುತ್ತೇನಂತೆ; ಕಿಟಕಿ ಪರದೆಗಳಲ್ಲಿ ಮೂಗೊರೆಸುತ್ತೇನಂತೆ. ಇದೊಂದು ಅಪರಾಧವೇ? ನೆಗಡಿಯು ಮನುಷ್ಯ ಮಾತ್ರರು ಮಳೆಗೆ ಸಲ್ಲಿಸುವ ಭಯಭಕ್ತಿಯಲ್ಲವೇ?


ನನ್ನ ಮನೋರಮೆಯೇನೂ ವರ್ಷ ವಿರೋಧಿಯಲ್ಲ. ಅದನ್ನು ಒಳಗಿದ್ದೇನೋಡಬೇಕುಎಂಬತತ್ವದವಳು.'ವರ್ಷಾಕಾಲದೊಳೊಂದು ದೆವಸಂ' ನಾನೂ ಅವಳೂ ಕಾರ್ಗಾಲ ಅನುಭವಿಸಲೆಂದೇ ಕೊಡಗಿನಲ್ಲಿ ಬಿಡಾರ ಹೂಡಿದ್ದೆವಲ್ಲ. ಅದೊಂದು ಕಾಫಿತೋಟದ ಮನೆ. ಬೆಟ್ಟದ ತುದಿಯಲ್ಲಿ ಕಟ್ಟಿದ್ದು 360 ಡಿಗ್ರಿ ತಿರುಗಿ ನೋಡುವಂತಿತ್ತು. ಸೂರ್ಯನಿದ್ದಾಗ ಕೆಳಗಿನ ಕಣಿವೆ, ಪಟದಲ್ಲಿ ಚಿತ್ರ ಬಿಡಿಸಿದಂತೆ ತೋರುತ್ತಿತ್ತು. ಮಳೆಯಲ್ಲಿ ಕಾಡು ಬೆಟ್ಟ ಕಮರಿಗಳ ಮೇಲೆ ಜಲದವಕುಂಠನ ಎಳೆದಂತೆ ಕಾಣುತ್ತಿತ್ತು. ಅಹೋರಾತ್ರಿ ಪತಪತ ಜೋಗುಳ. 'ಹಂ ತುಂ ಏಕ ಕಮರೇ ಮೇ ಬಂದಹೊ'. ಸೂರ್ಯ ಯಾವಾಗ ಹುಟ್ಟಿದನೊ ಮುಳುಗಿದನೊ ಗೊತ್ತಾಗಲೊಲ್ಲದು. ಮತ್ತೊಂದು ಮಳೆಗಾಲ ಜೋಗದಲ್ಲಾಯಿತು. ನಾವಿದ್ದ ಮೂರೂ ದಿನ ನಮ್ಮ ಕೋಣೆಯ ಕಿಟಕಿಯಿಂದ ಸಣ್ಣದೊಂದು ಹಸಿರುಟ್ಟ ಬೆಟ್ಟ ಕಾಣುತ್ತಿತ್ತು. ಅದರ ನೆತ್ತಿಯ ಮೇಲಿದ್ದ ಏಕೈಕ ಗಿಡವೊಂದು ಅರಿಸಿಣ ಮೀಯುವ ಮದುಮಗನಂತೆ ನಿಂತಿತ್ತು.

ಮನೆಯೊಳಗೆ ಬೆಚ್ಚಗಿದ್ದು ಜಗತ್ತು ತೋಯುವುದನ್ನು ಪ್ರೇಕ್ಷಕರಾಗಿ ನೋಡುವುದಕ್ಕಿಂತ, ಮಳೆನಾಟಕದಲ್ಲಿ ಪಾತ್ರಧಾರಿಗಳಾಗುವ ಪಾಡೇ ಬೇರೆ. ಬಾಲ್ಯದಲ್ಲಿ ಹೊಲದಿಂದ ಬರುವಾಗ ಸಂಜೆಮಳೆಗೆ ಸಿಕ್ಕಿಕೊಳ್ಳುತ್ತಿದ್ದುದುಂಟು. ಆಗ ಮೈಯಲ್ಲಿ ಕಸುವಿರಲಿಲ್ಲ. ದುಡಿತದಿಂದ ದಣಿದ ದೇಹ. ಯಾವಾಗ ಮನೆಗೆ ಬಿದ್ದೇನೊ, ಒದ್ದೆಕಳಚಿ ಬೆಚ್ಚಗಿನ ಬಟ್ಟೆಯುಟ್ಟು ಒಲೆ ಮುಂದೆ ಬಿಡಾರಹಾಕಿ, ಹಬೆಯಾಡುವ ಸಾರು ಬಿಡಿಸಿಕೊಂಡು ಮುದ್ದೆ ಮುರಿವೆನೊ ಎಂದು ಜೀವ ಕಾತರಿಸುತ್ತಿತ್ತು. ರೈತಾಪಿ ಗಂಡಿನ ಜೀವವು, 'ಆಷಾಢದ ಗಾಳಿ ಬೀಸಿಬೀಸಿ ಹೊಡೀತಿದ್ದರೆ ಹೇಸಿ ನನ್ನ ಜೀವ ಹೆಣ್ಣಾಗಿ ಯಾಕ ಹುಟ್ಟಲಿಲ್ಲ' ಎಂದು ಪರಿತಪಿಸಿದ್ದರೆ ಆಶ್ಚರ್ಯವಿಲ್ಲ. ಆದರೆ ಚಾರಣದಲ್ಲಿ ಮಳೆಯ ಮುಖಾಬಿಲೆಗೆ ಮನಸನ್ನೂ ದೇಹವನ್ನೂ ತಯಾರಿಟ್ಟುಕೊಂಡೇ ಹೋಗುವುದರಿಂದ ಪರಿತಪಿಸುವ ಬಾಬತ್ತಿಲ್ಲ. ಹಿಮಾಲಯದ ನಮ್ಮ ಯಾವ ಏರಾಟವೂ ಮಳೆಯಿಲ್ಲದೆ ಮುಗಿದಿಲ್ಲ. ಅಲ್ಲಿ ಮಳೆ ಮನಬಂದ ಗಿರಾಕಿ. ನೆತ್ತಿಗೆ ತಾಕುವಂತೆ ಕಾರ್ಮೋಡಗಳು ಬಂದು ಕೊಡವೆತ್ತಿ ಸುರಿಯುತ್ತವೆ. ಕುಂಭದ್ರೋಣ ಮುಸಲಧಾರೆ ನುಡಿಗಟ್ಟುಗಳ ಅರ್ಥವನ್ನು ಮನದಟ್ಟುಗೊಳಿಸುತ್ತವೆ. ಅಲ್ಲಿ ಮಳೆ ಫುಟಬಾಲ್ ಪಂದ್ಯದಂತೆ ಬೇಗನೆ ಮುಗಿಯುತ್ತದೆ. ಬಳಿಕ ಶುರುವಾಗುತ್ತದೆ ಕಾಣಿ– ಎಲುಬಿನ ಮಜ್ಜೆಯೊಳಗೂ ನುಸುಳಿ ನಡುಗಿಸುವ ಪ್ರಾಣಘಾತಕ ಥಂಡಿ. ಮೈಕೈ ಮರಗಟ್ಟಿ ಥರಥರ. ಹಲ್ಲು ಕಟಕಟ. ಸೆಟೆದ ಕೈಬೆರಳು ಮುಷ್ಟಿಯೊಳಗೆ ಸೇರಲು ತಾಸಾದರೂ ಬೇಕು.

ಮಲೆನಾಡ ಮಳೆಯಲ್ಲಿ ಇಂತಹ ಕೊಲ್ಲುಚಳಿಯಿಲ್ಲ. ಕೊಡಚಾದ್ರಿಯ ಮಳೆಚಾರಣವೊಂದು ನೆನಪಾಗುತ್ತಿದೆ. ನಡೆದಾಡುವ ಗೋರ್ಕಲ್ಲುಗಳಂತಿದ್ದ ನಮ್ಮ ಮೇಲೆ ಅದೇ ಕರೆಕರೆದು ದಣಿಯಿತು. ಅಲ್ಲಿ ನಮ್ಮನ್ನು ಹೆದರಿಸಿದ್ದು ರಪರಪಿಸಿದ ಧಾರೆಯಲ್ಲ. ಖಡಕಡಾಲ್ ಸಿಡಿಲಲ್ಲ. ಪಾದಸೇವಕರಾಗಿ ಮೆಲ್ಲಗೆ ಬಂದು ನೆತ್ತರು ಹೀರಿದ ಇಂಬಳಗಳು. ಬೇಸಿಗೆಯಲ್ಲಿ ಎಲ್ಲಡಗಿರುತ್ತವೆಯೊ, ನೆಲದೊಳಗಿಂದ ಪುತಪುತನೆ ಮೈತಳೆದು ಸೊಂಡಿಲಾಡಿಸುತ್ತ ನಿಂತು ಆಕ್ರಮಣ ಮಾಡುತ್ತವೆ. ಮಾಯದಂಥ ಒಂದು ಮಳೆ ಭೂಮಿಯ ಮೇಲಿನ ಎಷ್ಟೊಂದು ಜೀವಗಳ ಆವರ್ತನದ ಲಯವನ್ನು ಉದ್ಘಾಟಿಸುತ್ತದೆ!

ಮಲೆನಾಡ ಸೆರಗಿನಲ್ಲಿ ಹುಟ್ಟಿ ಬೆಳೆದ ನಾನು ಬರ ಕಂಡಿದ್ದು ಕಮ್ಮಿ. ಆದರೆ ಮಳೆ ತಳುವಿದಾಗ, ಬಿತ್ತಿದ ಬೆಳೆ ಒಣಗತೊಡಗಿದಾಗ, ನಮ್ಮಲ್ಲೂ ಹಾಹಾಕಾರ ಶುರುವಾಗುತ್ತಿತ್ತು. ಆಗ ಒನಕೆ ಮುಂಡಿಗೆ ಕಟ್ಟಿದ ಕಪ್ಪೆಯನ್ನು ಹೊತ್ತು, ಅರೆಬೆತ್ತಲೆಯಾಗಿ ಮನೆಮನೆಗೆ ಹೋಗಿ ತಣ್ಣೀರು ಹಾಕಿಸಿಕೊಳ್ಳುತ್ತಿದ್ದೆವು. 'ಮುಲ್ಲಮುಮಾನಿ' ಹಾಡುತ್ತಿದ್ದೆವು. ಬಿಸಿಲ ತಾಪದಿಂದ ಶಾನೇ ಬಳಲಿದ್ದ ಮುಲ್ಲ ಮುಮಾನಿಗೆ ನಮಾಜು ಮಾಡಲು ಅಂಗಶುದ್ಧಿಗೂ ನೀರಿರಲಿಲ್ಲವಂತೆ. ಅವರ ನೀರಿನ ಕುಂಭ ಒಡೆಯಿಂತೆ. ಆಗ ಹನ್ನೆರಡು ವರ್ಷದ ಮಳೆ ಒಮ್ಮೆಲೇ ಬಂತಂತೆ. ಮಕ್ಕಳು, ಮೂಗಪ್ರಾಣಿ, ಬತ್ತಿದ ಕೆರೆ, ಬಾಡಿದ ಬಾಳೆ ಮತ್ತು ಹೂವಿನ ತೋಟಗಳನ್ನು ಸಾಕ್ಷಿಯಾಗಿಟ್ಟು ಮುಗಿಲಿಗೆ ಮೊರೆಹೋಗುವ ರಿವಾಜುಗಳು ಎಲ್ಲೆಡೆ ಇವೆ. ಒಂದು ಮಳೆಹಾಡಲ್ಲಂತೂ ಗುಳೆ ಹೋಗುವವವರು ಎಳೆಗೂಸನ್ನು ಮಾರುವರು. ಮಲೆನಾಡಿಗರು 'ರೈನ್ ರೈನ್ ಗೋ ಅವೇ' ಹಾಡಿಯಾರು; ಬಯಲ ಸೀಮೆಯವರು ಮಾತ್ರ 'ಹುಯ್ಯೊಹುಯ್ಯೋ ಮಳೆರಾಯ' ಎಂದು ಕರೆಯುವರು; 'ಯಾತಕ್ಕೊ ಮಳೆಹೋದವೋ ಶಿವಶಿವಾ ಲೋಕ ತಲ್ಲಣಿಸುತಾವೇ' ಎಂದು ಹುಯ್ಯಲಿಡುವರು. ನಾನಾದರೂ ಹಂಪಿ ಸೀಮೆಗೆ ವಲಸೆ ಬಂದ ಬಳಿಕವೇ, ತನುಗೊಡ ಹೊರುವ, ಕತ್ತೆಗಳ ಮದುವೆ ಮಾಡುವ, ಗುರ್ಜಿಯನ್ನು ಪೂಜಿಸುವ, ಜೋಕುಮಾರನನ್ನು ತಿರುಗಾಡಿಸುವ, ಕಾರ್‌ಹಬ್ಬ ಮಾಡುವ, ಕಂಬಳಿ ಬೀಸುವ ನಾನಾ ಆಚರಣೆಗಳಿಗೆ ಸಾಕ್ಷಿಯಾದೆ.






ಮಳೆಗಾಗಿ ಮಂದಿ ಎಷ್ಟೇ ಮೊರೆಯಿಡಲಿ, ಭೂಮಿಯನ್ನು ಆವರಿಸಿ ತೀಡುವ ವಾಯುವಿನ ಚಲನೆಗಳಿಂದ ಸಂಭವಿಸುವ ಋತುಮಾನಗಳಿಗೆ ಅವುಗಳದ್ದೇ ಲಯವಿದೆ. ಅವು ತಮ್ಮ ಸಹಜಲಯ ಕಳೆದುಕೊಂಡಾಗ, ಬರವಾಗಿ ಮೇಘಸ್ಫೋಟವಾಗಿ ನೆರೆಯಾಗಿ ಕಾಡಿಸುತ್ತವೆ. ಪ್ರಕೃತಿಯ ರಹಸ್ಯ ಮನುಕುಲಕ್ಕೆ ಪೂರಾ ದಕ್ಕಿಲ್ಲ. ಹೀಗಾಗಿಯೇ ಅದು ಕಾರಣಿಕ, ವಿರಾಟಪರ್ವದ ಪಠಣ ಇತ್ಯಾದಿ ಮನವಿಗಳನ್ನು ಮುಗಿಲಿಗೆ ಸಲ್ಲಿಸುತ್ತ ಬಂದಿದೆ. ಇವುಗಳಲ್ಲಿ ಮೇಘಮಲ್ಹಾರ ಹಾಡುವುದೂ ಒಂದು. 'ಸಾವನ್ ಕಿ ಋತ ಆಯೋರೆ ಬಡಿಬಡಿ ಬೂಂದನ ಲಾಗೀ ಬರಸನ್' ಬಂದಿಶನ್ನು ಆಲಿಸುವಾಗ ಮನ ಖುಶಿಯಿಂದ ತೋಯುತ್ತದೆ. ಈ ಹಾಡುಗಳು ಅಗಲಿದ ಪ್ರಿಯಕರನ್ನು ಕೂಡುವ ವಿರಹಿಯ ಉತ್ಕಟ ಹಂಬಲದೊಂದಿಗೆ ಕೊನೆಗೊಳ್ಳುತ್ತವೆ. ಒಮ್ಮೆ ತಾನಸೇನನಿಗೆ ದೀಪಕರಾಗ ಹಾಡಿ ದೀಪ ಬೆಳಗಿಸಿದ ಬಳಿಕ, ದೇಹವು ತಾಪದಿಂದ ಸುಡಲಾರಂಭಿಸಿತಂತೆ. ಆಗವನ ಹೆಮ್ಮಕ್ಕಳು ಮೇಘಮಲ್ಹಾರ ಹಾಡಿ ತಂಪುಗೊಳಿಸಿದರಂತೆ. ಮಳೆಯ ಖಾತೆ ಯಾವಾಗಲೂ ಗಂಡುದೇವತೆಗಳಿಗೇ ವಹಿಸಲಾಗಿದೆ. ಆದರಿಲ್ಲಿ ಮಳೆ ಬರಿಸುತ್ತಿರುವುದು ಮಳೆರಾಯನಲ್ಲ; ಮಳೆಯಮ್ಮಗಳು.

ಕಾರ್ಗಾಲದ ವೈಭವವನ್ನು ಕವಿಗಳು ಬಗೆಬಗೆಯಾಗಿ ಬಣ್ಣಿಸಿದ್ದಾರೆ. ಅದರಲ್ಲೂ ಮಲೆನಾಡ ಸೆರಗಾದ ಧಾರವಾಡದ ಮಳೆ, ನೂರಾರು ಹಾಡುಗಳನ್ನು ಕಟ್ಟಿಸಿದೆ. ಬೇಂದ್ರೆಯವರ ಶ್ರಾವಣದ ಕವನಗಳಲ್ಲಿ ಮಳೆ ಕಾಣುವುದು ಮಾತ್ರವಲ್ಲ, ಕೇಳಿಸುತ್ತದೆ ಕೂಡ. 'ಶ್ರಾವಣ' ಎಂದರೆ ಕೇಳು ಎಂಬರ್ಥವೂ ಇದೆಯಷ್ಟೆ. ಅವರ ಪ್ರಕಾರ 'ಮಳೆಗಳಿಗೆ ಮತ್ತ ಹೊಳೆಗಳಿಗೆ ಆಗ್ಯಾದ ಲಗ್ನ ಅದರಾಗ ಭೂಮಿ ಮಗ್ನ'; ಕಣವಿಯವರ ಪ್ರಕಾರ 'ನೆಲಬಾನಿಗೂ ಜಲವೇರಿದೆ'. ವರ್ಷ ಋತುವಿನಲ್ಲಿ ದ್ಯಾವಾಪೃಥ್ವಿಗಳು ಕೂಡುವ ಈ ಪರಿ, ಅಲೌಕಿಕ–ಲೌಕಿಕಗಳ ಮಿಲನವೂ ಆಗಿದೆ. ಜಲ ಆಗಸದಲಿದ್ದೇನು ಫಲ? ಅಧಃಪತನವಾದಾಗಲೇ ಸಾರ್ಥಕ. ಮಳೆ–ಬೇಂದ್ರೆಯವರಲ್ಲಿ ಅವರಂತೆಯೇ ಚಂಚಲ. ಕುವೆಂಪು ಅವರಲ್ಲಿ ಅದು ಗುಡುಗು ಸಿಡಿಲುಗಳ ನಡುವೆ, ಕೆನ್ನೆತ್ತರ ತುಂಗೆ ಗಿಡಮರಗಳನ್ನು ಕೊಚ್ಚಿ ಪ್ರವಹಿಸಿದಂತೆ ಮಹಾಗಂಭೀರ; 'ಕದ್ದಿಂಗಳು ಕಗ್ಗತ್ತಲು ಕಾರ್ಗಾಲದ ರಾತ್ರಿ'ಯಲ್ಲಿ ವರ್ಷರೂಪೀ ಭೈರವ ಮಾಡುವ ತಾಂಡವ.

ಮುಂದುವರೆಯುವುದು..

## ಎಸ್.ಐ. ಟಿ. ಮುಂದೆ ದಾಖಲಾಗುವ ಪ್ರಕರಣಗಳಿಗೆ ಇಬ್ಬರು ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರ ನೇಮಕ

**ಬೆಂಗಳೂರು:** ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂಬ ಆರೋಪದ ಪ್ರಕರಣಗಳ ತನಿಖೆಗೆ ರಚಿಸಲಾಗಿರುವ ವಿಶೇಷ ತನಿಖಾ ದಳವು ದಾಖಲಿಸುವ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಹಾಜರಾಗಲು ಹಾಗೂ ಪ್ರಕರಣಗಳನ್ನು ನಡೆಸಲು ಸರ್ಕಾರಿ ಅಭಿಯೋಜಕರ ತಂಡವನ್ನು ಬಲಪಡಿಸುವ ಉದ್ದೇಶದಿಂದ ಹಿರಿಯ ವಕೀಲರಾದ ಅಶೋಕ್ ನಾಯಕ್ ಹಾಗೂ ಜಯನಾ ಕೊಠಾರಿ ಅವರನ್ನು ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕರನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

## ಗುರುವಿನ ಸ್ಥಾನಕ್ಕಿಂತ ದೊಡ್ಡದು ಮೊತ್ತೊಂದಿಲ್ಲ

■ **ಹಂಪಿ ಟೈಮ್ಸ್ ಕೊಟ್ಟೂರು**

ಮಕ್ಕಳಿಗೆ ಸಂಸ್ಕಾರ ಕಲಿಸಿ ಬೆಳೆಸುವ ನಿಟ್ಟಿನಲ್ಲಿ ಪೋಷಕರು ಮುಂದಾಗಬೇಕು ಎಂದು.ಡಾ. ಹಿರೇಮಠದ ಶಾಂತ ವೀರಪ್ಪ ಮಹಾಸ್ವಾಮಿಗಳು ಹೂವಿನ ಹಡಗಲಿ ಶ್ರೀಗಳು ಹೇಳಿದರು.

ಡೊಣೂರು ಚಾನುಕೋಟಿ ಮಠ ಶ್ರೀ ಮರುಳ ಸಿದ್ದೇಶ್ವರ ರಥೋತ್ಸವ ಮತ್ತು ಜಗಜ್ಯೋತಿ ಬಸವೇಶ್ವರ ಜಯಂತಿ ಅಂಗವಾಗಿ ಪಟ್ಟಣದ ತೇರು ಬಯಲು ಬಸವೇಶ್ವರ ದೇವಾಲಯ ಆವರಣದಲ್ಲಿ ಮಂಗಳವಾರ ಸಂಜೆ ಕಲ್ಪತರು ಕಲಾಟ್ರಸ್ಟ್ ಇವರ ಸಹಯೋಗದಲ್ಲಿ ಸಾಂಸ್ಕೃತಿಕೋತ್ಸವ ಏಳನೆ ದಿನ ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡಿದರು.

ಈ ಜಗತ್ತಿನಲ್ಲಿ ಗುರುವಿನ ಸ್ಥಾನ ದೊಡ್ಡದು. ಮಕ್ಕಳು ಗುರುಗಳನ್ನ ಗೌರವಿಸಬೇಕು. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎನ್ನುವ ನಾನ್ನುಡಿಯಂತೆ ಗುರುವಿನ ಮಾರ್ಗದರ್ಶನದಿಂದ ಎಂತಹಾ ಸಾಧನೆಯನ್ನು ಸಾಧಿಸಬಹುದು ಎಂದು ಆಶೀರ್ವಚನ ನೀಡಿದರು.




ಜಂಬೂರು ಮರುಳ ಸಿದ್ದಪ್ಪ ಪರಂಪರಿಕ ನಾಟಿ ವೈದ್ಯರು ಆರೋಗ್ಯದ ಸಲಹೆ ನೀಡಿದರು.

ಷ.ಬ್ರ .ಡಾ.ಸಿದ್ಧಲಿಂಗ ಶಿವಾಚಾರ್ಯ ಶ್ರೀಗಳು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಡೋಣೂರು ಶ್ರೀ ಚಾನುಕೋಟಿ ಮಠದ ಸಂಸ್ಕಾರ ಭಾರತಿ ಬೇಸಿಗೆಯ ಶಿಬಿರದ ವಿಧ್ಯಾರ್ಥಿಗಳಿಂದ ವೀರಗಾಸೆ ನೃತ್ಯ ಪ್ರದರ್ಶಿಸಿದರು. ಎಂಎಂಜೆ ಕಾವ್ಯ ಮತ್ತು ತಂಡದವರು ಭರತನಾಟ್ಯ ನೃತ್ಯ ಪ್ರದರ್ಶನ ನೀಡಿದರು.

ಬೆಂಗಳೂರಿನ ಚಲನ ಚಿತ್ರ ನಟಿ ಪುಣ್ಯ ಗೌಡ ಮತ್ತು ತಂಡದವರಿಂದ ಗುರು ಶಿಷ್ಯರ ನಾಟಕ ಭಕ್ತಿಭಾವದಿಂದಮೂಡಿಬಂತು.ನೋಡುಗರನ್ನು ಮುಖವಿಸ್ಮಿತರನ್ನಾಗಿಸಿತು.ಚಿಗಟೇರಿ ಕೊಟ್ರೇಶಿ ಕಲ್ಪತರು ಕಲಾಟ್ರಸ್ ಅಧ್ಯಕ್ಷರು ಕಾರ್ಯಕ್ರಮ ನಿರ್ವಹಿಸಿ ಕಾರ್ಯಕ್ರಮ ನಿರೂಪಿಸಿದರು.

## ನಗು ಮೂಡಿಬರಲಿ



ನಗುವೆಂಬ ಸಿರಿಯೊಂದು
ಮೊಗದಲ್ಲಿ ಅರಳಿರಲಿ
ಬಿಗುಮಾನ ಬದಿಗಿರಿಸಿ ನಗು ಮೂಡಿಬರಲಿ

ಚಿಗುರೆಲೆಯ ತಳಿರಂತೆ
ಮಿಗಿಲೆನಿಪ ಬೆಳೆಯಂತೆ
ಮಗುವಂತೆ ಮತ್ತೊಮ್ಮೆ ನಗು ಮೂಡಿಬರಲಿ

ಅವಸರದ ಬದುಕಿನಲಿ
ಬೆವರಿಳಿವ ದುಡಿಮೆಯಲಿ
ಅವನೆಲ್ಲ ಮರೆತೊಮ್ಮೆ ನಗು ಮೂಡಿಬರಲಿ


ಕಾಸಿದಕೆ ಖರ್ಚಿಲ್ಲ
ತಾಸಿದಕೆ ಬೇಕಿಲ್ಲ
ಕೂಸಂತೆ ಒಳಗಿಂದ ನಗು ಮೂಡಿಬರಲಿ

ಕುಪಿತರಾಗಲು ಬೇಡಿ
ಶಪಿಸಿ ತೆಗಳಲು ಬೇಡಿ
ಜಿಪುಣತನ ತೊರೆದೀಗ ನಗು ನೂಡಿಬರಲಿ

ಹಗಲಿರುಳ ಕಾಯಕದೆ
ದೊರಕಿರುವ ಯಶದಂತೆ
ಹಗುರಾಗಿ ಮನಸಾರೆ ನಗು ಮೂಡಿಬರಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಬಿಸಿಲೋ.. ಉರಿ ಬಿಸಿಲು



ಬಿಸಿಲೋ..ಬಿಸಿಲು..
ಕಲ್ಯಾಣ ಕರ್ನಾಟಕ..
ಉತ್ತರ ಕರ್ನಾಟಕ..
ಬಲು ಬಿಸಿಲಿನ ಬಾಳು

ಬಿಸಲ ಬಯಲಲಿ..
ನೆತ್ತಿ ಕಾದು ಬಣ ಬಣ..
ಗಂಟಲು ವಣಗಿ ವಣ ವಣ..
ಬಿಸಿಲ ಝಳಕೆ ಜನ ತತ್ತರ..

ಇನ್ನೂ ಕೆಲ ಕಾಲ ಬಿಸಿಲ ಉರಿ
ಕೆಚ್ಚಲಿನ ಉರಿ ಅತಿಹೆಚ್ಚಂತೆ
ಹವಾಮಾನದ ವರದಿ ಇದಂತೆ
ಜನ ಜೀವ ಬವಣೆ ಅಧಿಕವಂತೆ

ಬಟ್ಟ ಬಯಲ ಕರ್ನಾಟಕದಿ
ಕಾದ ಕೆಂಡದಂತ ಸೂರ್ಯ
ಸುಡು ಅಗ್ನಿ ಜ್ವಾಲಮುಖಿದಿ
ಕನ್ನಡ ನೆಲ ಕಾದು ಕೆಂಪಿಟ್ಟಿದೆ

ತಂಪು ತಂಪು ಪಾನೀಯಗಳು
ಇಂಪು ಹಣ್ಣು ಹಂಪಲುಗಳು
ಜನ ಜೀವ ತಂಪಿಗೆ ಸಾಲದಾಗಿದೆ
ಬಿಸಿಲ ಬೆವರಿಳಿಕೆ ತುಂಬಿ ಹರಿದಿದೆ

ಹೊರಗೂ ಒಳಗೂ ಬಿಸಿ ಬಿಸಿ
ಫ್ಯಾನ್ ರೆಫ್ರೇಜಿಟ್ರೂ ಬಿಸಿ ಬಿಸಿ
ಬಿಸಿ ಬಿಸಿ ಗಾಳಿಯೇ ಎಲ್ಲೆಲ್ಲೂ
ಬೆವರು ಬೆವರುಸಾಲಿ ಮೈಯೆಲ್ಲಾ

ಒಂದೆಡೆ ಚುನಾವಣಾ ಬಿಸಿಲು
ಇನ್ನೊಂದೆಡೆ ರಾಜಕಾರಣ ಬಿಸಿಲು
ಮತ್ತೊಂದೆಡೆ ಅತ್ಯಾಚಾರ ಪೆನ್ ಡ್ರೈವ್ ಹಂಪ್
ಬಿಸಿಲ ಕರ್ನಾಟಕಕೆಂದು ತಂಪು!

– ಸೋ.ದಾ.ವಿರೂಪಾಕ್ಷ ಗೌಡ,
ಹೊಸಪೇಟೆ

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಗ್ರಾಮೀಣ ಜನರ ಬದುಕಿನ ಬವಣೆಗಳ ನಿವಾರಕ ಪಂಚಾಯತ್ ರಾಜ್ ... ಒಂದು ಅವಲೋಕನ

ಗ್ರಾಮೀಣ ಜನರ ಬದುಕಿನ ಬವಣೆಗಳನ್ನು ನೀಗಿಸುವ, ಅವರಿಗೆ ಸ್ಥಳೀಯವಾಗಿ ಆಡಳಿತ ನಡೆಸಲು ಅನುಕೂಲವಾಗುವ ನಿಟ್ಟಿನಲ್ಲಿ ಜಾರಿಯಾಗಿರುವ ಸ್ಥಳೀಯ ಆಡಳಿತಾತ್ಮಕ ವ್ಯವಸ್ಥೆಯನ್ನೇ ಪಂಚಾಯತ್ ರಾಜ್ ಎಂದು ಕರೆಯುವುದು.

ಇದನ್ನು ಮುಖ್ಯವಾಗಿ ಮೂರು ವಲಯಗಳಲ್ಲಿ ಗುರುತಿಸಲಾಗಿದ್ದು ಗ್ರಾಮ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿ, ತಾಲೂಕುಗಳ ವ್ಯಾಪ್ತಿಯಲ್ಲಿ ತಾಲೂಕು ಪಂಚಾಯಿತಿ ಮತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯಿತಿ/ ಪರಿಷತ್ ಎಂದು ಗುರುತಿಸಲಾಗಿದೆ.

20 ಲಕ್ಷಕ್ಕಿಂತಲೂ ಕಡಿಮೆ ಮತದಾರರನ್ನು ಹೊಂದಿರುವ ಭಾಗದಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೇವಲ ಎರಡು ರೀತಿಯ ಪಂಚಾಯತ್ ವ್ಯವಸ್ಥೆಗಳು ಇದ್ದು ಆಡಳಿತ ನಡೆಸಲು ಅನುಕೂಲ ಕಲ್ಪಿಸಲಾಗಿದೆ.

ಎಲ್ಲಾ 3 ಪಂಚಾಯಿತಿ ವ್ಯಾಪ್ತಿಗಳಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆಗಳು ಜರುಗುತ್ತವೆ. ಆಯಾ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಇರುವ ಜನರು ಮತದಾನದ ಹಕ್ಕನ್ನು ಹೊಂದಿರುತ್ತಾರೆ. ಈ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸದಸ್ಯರು ಕಡ್ಡಾಯವಾಗಿ ಇರಲೇಬೇಕು. ಇದರ ಜೊತೆಗೆ ಆಯಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅಧ್ಯಕ್ಷರು ಮತ್ತು ಮಹಿಳಾ ಸದಸ್ಯರು ಮೂರನೇ ಒಂದು ಭಾಗದಷ್ಟು ಇರಲೇಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಸಂವಿಧಾನದ 73ನೇ ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸಿ 1992 ರಲ್ಲಿ ಜಾರಿಗೆ ತರಲಾಯಿತು. ಹಲವಾರು ಗುರುತರ ಬದಲಾವಣೆಗಳನ್ನು ತರುವ ಮೂಲಕ 1999 ಏಪ್ರಿಲ್ ನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಬಲಯುತವಾಗಿ ಜಾರಿಯಲ್ಲಿರಿಸಲಾಯಿತು. ನಮ್ಮ ಭಾರತ ದೇಶದಲ್ಲಿ ನಾಗಾಲ್ಯಾಂಡ, ಮಿಜೋರಾಂ ಮತ್ತು ಮೇಘಾಲಯ ರಾಜ್ಯಗಳು ಮತ್ತು ದೆಹಲಿ ಕೇಂದ್ರಾಡಳಿತ ಪ್ರದೇಶವನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ವ್ಯವಸ್ಥೆಯು ಜಾರಿಯಲ್ಲಿದೆ.

ಪ್ರತಿಯೊಂದು ಗ್ರಾಮವು ರಾಜಕೀಯವಾಗಿ ಸಶಕ್ತವಾಗಿರಬೇಕು ಮತ್ತು ತನ್ನ ಗ್ರಾಮದ ಕುಂದು ಕೊರತೆಗಳನ್ನು ಅಭಿವೃದ್ಧಿ ಕಾರ್ಯಗಳ ವ್ಯವಸ್ಥೆಯನ್ನು ತಾನೆ ನೋಡಿಕೊಳ್ಳಬೇಕು, ತನ್ಮೂಲಕ ಸಶಕ್ತ ಗ್ರಾಮವಾಗಿ ಬೆಳೆಯಬೇಕು ಎಂಬುದು ಗಾಂಧೀಜಿಯವರ ಸ್ವರಾಜ್ಯದ ಮೂಲ ಕಲ್ಪನೆಯಾಗಿತ್ತು. ಪಂಚಾಯತ್ ರಾಜ್ ವ್ಯವಸ್ಥೆಯು ನಮ್ಮ ರಾಜಕೀಯ ವ್ಯವಸ್ಥೆಯ ಬುನಾದಿ ಎಂದು ಪ್ರತಿಪಾದಿಸಿದ ಅವರು ಆಯಾ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ಬರುವ ಮೂಲಭೂತ ಸಮಸ್ಯೆಗಳು ಮತ್ತು ಅವುಗಳ ನಿವಾರಣಾತ್ಮಕ ಕಾರ್ಯಗಳಿಗಾಗಿ ಅಲ್ಲಿಯದೇ ಚುನಾಯಿತ ಸದಸ್ಯರನ್ನೊಳಗೊಂಡಿದ್ದು ಜೊತೆಗೆ ಸ್ಥಳೀಯ ಆಡಳಿತಾಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ಹೊಂದಿದ್ದು ಈರ್ವರು ಜೊತೆಯಾಗಿ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ಅಲ್ಲಿಯ ಮೂಲಭೂತ ಸಮಸ್ಯೆಗಳನ್ನು ಪೂರೈಸುವುದರ ಜೊತೆ ಜೊತೆಗೆ ಅಭಿವೃದ್ಧಿ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಅವುಗಳನ್ನು ಪೂರೈಸುವುದು ಇವರ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತವೆ.





1953 ರಲ್ಲಿ ಬಲವಂತರಾಯ್ ಮೆಹ್ತಾ ಆಯೋಗವು ಸ್ಥಳೀಯ ಅಧಿಕಾರ ವಿಕೇಂದ್ರೀಕರಣವನ್ನು ಅನುಮೋದಿಸಿ ಸ್ಥಳೀಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಪರಿವರ್ತನೆಯನ್ನು ತರುವ ಸಲುವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅನುಮೋದಿಸಿದರು. ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಯನ್ನು ಸೃಷ್ಟಿಸಲು, ಸ್ವಸಹಾಯವನ್ನು ಮತ್ತು ಪರಾವಲಂಬನೆಯನ್ನು ತಪ್ಪಿಸಲು ಸ್ವಯಂ ಆಡಳಿತದ ಈ ವ್ಯವಸ್ಥೆಯನ್ನು 1957ರಲ್ಲಿ ಜಾರಿಗೆ ತರಲಾಯಿತು. ಆಡಳಿತವನ್ನು ಸುಲಭಗೊಳಿಸಲು ತರಬೇತುಗೊಳಿಸಲ್ಪಟ್ಟ ಗ್ರಾಮ ಸಹಾಯಕರನ್ನು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಲಾಯಿತು.

- **ಸಾಮುದಾಯಿಕ ಕೃಷಿ ಮತ್ತು ಪಶು ಸಂಗೋಪನೆಗೆ ಪ್ರೋತ್ಸಾಹ ನೀಡುವುದು,**
- **ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು**
- **ಸಾಂಪ್ರದಾಯಿಕ ಮಾದರಿಯ ಒಕ್ಕಲುತನ ಹುಟ್ಟುವಳಿಗೆ ಸಹಾಯಕವಾಗುವ ವಿವಿಧ ವರ್ಗಗಳ ಜನರಿಗೆ ಉದ್ಯೋಗಾವಕಾಶವನ್ನು ಸ್ಥಳೀಯವಾಗಿ ಕಲ್ಪಿಸುವುದು**
- **ಮಹಿಳೆಯರು ಮತ್ತು ಮಕ್ಕಳನ್ನು ಸಮುದಾಯದ ಭಾಗವಾಗಿ ಭಾಗವಹಿಸಲು ಉತ್ತೇಜಿಸುವುದು**
- **ವಿವಿಧ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವುದು**



- **ಕರಗಳನ್ನು ಸಂಗ್ರಹಿಸುವುದು, ಮನೆಗಳನ್ನು ಮತ್ತು ಉಳುವ ಭೂಮಿಯನ್ನು ವ್ಯವಸ್ಥಿತವಾಗಿ ಸಮೀಕ್ಷೆ ಮಾಡುವ ಮೂಲಕ ಅವುಗಳ ಉತಾರಗಳು ಮತ್ತು ಹಕ್ಕು ಪತ್ರಗಳ ದಾಖಲಾತಿಗಳನ್ನು ಇಡುವುದು ಮುಂತಾದ ಕೆಲಸಗಳು ಇವರ ವ್ಯಾಪ್ತಿಯಲ್ಲಿ ಬರುತ್ತವೆ.**

ನಮ್ಮ ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತಾದ ವಿಸ್ತೃತ ಅಧ್ಯಯನಕ್ಕೆ ಅನುಕೂಲವಾಗಲೆಂದು ಗದಗ ಜಿಲ್ಲೆಯ ನಾಗಾವಿ ಎಂಬ ಗ್ರಾಮದಲ್ಲಿ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.

ಪ್ರತಿ ವರ್ಷ ಏಪ್ರಿಲ್ 24ರಂದು ಪಂಚಾಯತ್ ರಾಜ್ ದಿವಸವೆಂದು ಆಚರಿಸಲಾಗುತ್ತಿದ್ದು ಆ ದಿನ ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತಿಕರಣ ಪ್ರಶಸ್ತಿಯನ್ನು ಕೊಡ ಮಾಡುತ್ತಾರೆ. ನಾನಾಜಿ ದೇಶಮುಖ ಸರ್ವೋತ್ತಮ ಪಂಚಾಯತ ಪ್ರಶಸ್ತಿ ಸತತ ವಿಕಾಸ ಪುರಸ್ಕಾರ ಮತ್ತು ಇನ್ನೂ ಹಲವಾರು ಪ್ರಶಸ್ತಿಗಳನ್ನು ಕೊಡ ಮಾಡುವ ಮೂಲಕ ಪಂಚಾಯತ್ ವ್ಯವಸ್ಥೆಯನ್ನು ಇನ್ನಷ್ಟು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಲು ಪ್ರೋತ್ಸಾಹಿಸಲಾಗುತ್ತದೆ. ರಾಷ್ಟ್ರೀಯ ಪಂಚಾಯತ್ ರಾಜ್ ಪ್ರಶಸ್ತಿಗೆ ಅರ್ಹವಾಗಲು ಪ್ರತಿಯೊಂದು ಗ್ರಾಮ ಪಂಚಾಯಿತಿಗಳು ಈ ನವ ಅಂಶಗಳಲ್ಲಿ ಉನ್ನತಿಯನ್ನು ಸಾಧಿಸಬೇಕು.

### ಬಡತನ ರಹಿತ ಮತ್ತು ಸುಧಾರಿತ ಜೀವನ ಮಟ್ಟ

- **ಆರೋಗ್ಯಕರ ಪಂಚಾಯತಿ**
- **ಮಕ್ಕಳ ಸ್ನೇಹಿ ಪಂಚಾಯತಿ**
- **ಜಲ ಸ್ವಾಯುತ್ತತೆಯನ್ನು ಹೊಂದಿರುವ ಪಂಚಾಯಿತಿ**
- **ಸ್ವಚ್ಛ ಮತ್ತು ಹಸಿರು ಯುಕ್ತ ಪಂಚಾಯಿತಿ**
- **ಬಲಿಷ್ಠ ಕಟ್ಟಡವನ್ನು ಹೊಂದಿರುವ ಪಂಚಾಯಿತಿ**
- **ಸಾಮಾಜಿಕ ಸುರಕ್ಷತೆಯನ್ನು ಅಳವಡಿಸಿಕೊಂಡಿರುವ ಪಂಚಾಯಿತಿ**
- **ಉತ್ತಮ ಆಡಳಿತ ನಿರ್ವಹಿಸುವ ಪಂಚಾಯಿತಿ**
- **ಮಹಿಳಾ ಸ್ನೇಹಿ ಪಂಚಾಯತಿ**

ಪಂಚಾಯತ್ ರಾಜ್ ವ್ಯವಸ್ಥೆಯು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಮೂಲ ಬುನಾದಿಯಾಗಿದ್ದು ಅದರ ತಳಹದಿಯ ಮೇಲೆ ಸಶಕ್ತ ಭಾರತವನ್ನು ಕಟ್ಟುವ ಗಾಂಧೀಜಿಯವರ ಕನಸು ನನಸಾಗಿದೆ. ಈ ವ್ಯವಸ್ಥೆ ಇನ್ನೂ ಹೆಚ್ಚು ಅಭಿವೃದ್ಧಿಯನ್ನು ಕಾಣಲಿ.

ಪಂಚಾಯತ್ ರಾಜ್ ಸಶಕ್ತವಾಗಿರಲಿ .

## ಕೊಪ್ಪಳ ಲೋಕಸಭಾ ಕ್ಷೇತ್ರದಲ್ಲಿ ಶೇ.70.99 ರಷ್ಟು ಮತದಾನ

### ಡಿಸಿ ಅತುಲ್ ಹೇಳಿಕೆ। 13,24,898 ಮತದಾರರಿಂದ ಹಕ್ಕು ಚಲಾವಣೆ

■ ಹಂಪಿ ಟೈಮ್ಸ್ ಕೊಪ್ಪಳ


ಸಾರ್ವತ್ರಿಕ ಲೋಕಸಭಾ ಚುನಾವಣೆ-2024ರ ಹಿನ್ನಲೆಯಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಮೂರನೇ ಹಂತದಲ್ಲಿ ಮಂಗಳವಾರ ನಡೆದ ಮತದಾನದಲ್ಲಿ ಶೇ.70.99 ರಷ್ಟು ಮತದಾನವಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ಹೇಳಿದರು.

ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಂಟು ವಿಧಾನಸಭಾ ಕ್ಷೇತ್ರಗಳು ಸೇರಿ ಒಟ್ಟು 2045 ಮತಗಟ್ಟೆಗಳ ಪೈಕಿ 9,19,499 ಪುರುಷ, 9,46,763 ಮಹಿಳೆಯರು ಹಾಗೂ ಇತರೆ 135 ಸೇರಿ ಒಟ್ಟು 18,66,397 ಮತದಾರರಿದ್ದು, ಇದರಲ್ಲಿ 6,69,583 ಪುರುಷ, 6,55,275 ಮಹಿಳೆಯರು ಹಾಗೂ ಇತರೆ 40 ಸೇರಿ 13,24,898 ಮತದಾರರು ಮತ ಚಲಾಯಿಸಿದ್ದಾರೆ.

**ವಿಧಾನಸಭಾ ಕ್ಷೇತ್ರವಾರು ಮತದಾನ:**

**ಕೊಪ್ಪಳ ಜಿಲ್ಲೆಯ 60-ಕುಷ್ಟಗಿ ವಿಧಾನಸಭಾ ಕ್ಷೇತ್ರದಲ್ಲಿ:** 268 ಮತಗಟ್ಟೆ, 1,21,526 ಪುರುಷರು, 1,20,747 ಮಹಿಳೆಯರು, 10 ಇತರೆ ಸೇರಿ ಒಟ್ಟು 2,42,283 ಮತದಾರರಿದ್ದು, ಇದರಲ್ಲಿ 85,312 ಪುರುಷರು, 82,561 ಮಹಿಳೆಯರು, 2 ಇತರೆ ಒಳಗೊಂಡಂತೆ ಒಟ್ಟು 1,67,875 ಮತದಾರರು ಮತದಾನ ಮಾಡಿ ಶೇ.69.29 ರಷ್ಟು ಮತದಾನವಾಗಿದೆ.

**61-ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ:** 266 ಮತಗಟ್ಟೆ, 1,13,268 ಪುರುಷರು, 1,17,408 ಮಹಿಳೆಯರು, 12 ಇತರೆ ಸೇರಿ



ಒಟ್ಟು 2,30,688 ಮತದಾರರಿದ್ದು, ಇದರಲ್ಲಿ 85,335 ಪುರುಷರು, 84,009 ಮಹಿಳೆಯರು, 4 ಇತರೆ ಒಳಗೊಂಡಂತೆ ಒಟ್ಟು 1,69,348 ಮತದಾರರು ಮತದಾನ ಮಾಡಿ ಶೇ.73.41 ರಷ್ಟು ಮತದಾನವಾಗಿದೆ.

**62-ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ:** 235 ಮತಗಟ್ಟೆ, 1,02,986 ಪುರುಷರು, 1,06,250 ಮಹಿಳೆಯರು, 14 ಇತರೆ ಸೇರಿ ಒಟ್ಟು 2,09,250 ಮತದಾರರಿದ್ದು, ಇದರಲ್ಲಿ 79,998 ಪುರುಷರು, 78,074 ಮಹಿಳೆಯರು, 4 ಇತರೆ ಒಳಗೊಂಡಂತೆ ಒಟ್ಟು 1,58,076 ಮತದಾರರು ಮತದಾನ ಮಾಡಿ ಶೇ.75.54 ರಷ್ಟು ಮತದಾನವಾಗಿದೆ.

**63-ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ** : 256 ಮತಗಟ್ಟೆಗಳಲ್ಲಿ 1,14,805 ಪುರುಷರು, 1,15,463 ಮಹಿಳೆಯರು, 6 ಇತರೆ ಸೇರಿ ಒಟ್ಟು 2,30,274 ಮತದಾರರಿದ್ದು, ಇದರಲ್ಲಿ 86,955 ಪುರುಷರು, 82,817 ಮಹಿಳೆಯರು, 3 ಇತರೆ ಒಳಗೊಂಡಂತೆ ಒಟ್ಟು 1,69,775 ಮತದಾರರು ಮತದಾನ ಮಾಡಿ ಶೇ.73.73 ರಷ್ಟು ಮತದಾನವಾಗಿದೆ.

**64-ಕೊಪ್ಪಳ ವಿಧಾನಸಭಾ ಕ್ಷೇತ್ರದಲ್ಲಿ:** 292 ಮತಗಟ್ಟೆಗಳಲ್ಲಿ 1,30,831 ಪುರುಷರು, 1,34,617 ಮಹಿಳೆಯರು, 17 ಇತರೆ ಸೇರಿ ಒಟ್ಟು 2,65,465 ಮತದಾರರಿದ್ದು, ಇದರಲ್ಲಿ 1,00,006 ಪುರುಷರು, 96,367 ಮಹಿಳೆಯರು, 3 ಇತರೆ ಒಳಗೊಂಡಂತೆ ಒಟ್ಟು 1,96,376 ಮತದಾರರು ಮತದಾನ ಮಾಡಿ ಶೇ.73.97 ರಷ್ಟು ಮತದಾನವಾಗಿದೆ.

**ರಾಯಚೂರು ಜಿಲ್ಲೆಯ 58-ಸಿಂಧನೂರು ವಿಧಾನಸಭಾ ಕ್ಷೇತ್ರದಲ್ಲಿ:** 269 ಮತಗಟ್ಟೆಗಳು, 1,20,300 ಪುರುಷರು, 1,26,958 ಮಹಿಳೆಯರು, 24 ಇತರೆ ಸೇರಿ ಒಟ್ಟು 2,47,282 ಮತದಾರರಿದ್ದು, ಇದರಲ್ಲಿ 81,783 ಪುರುಷರು, 81,714 ಮಹಿಳೆಯರು, 4 ಇತರೆ ಒಳಗೊಂಡಂತೆ ಒಟ್ಟು 1,63,501 ಮತದಾರರು ಮತದಾನ ಮಾಡಿ ಶೇ.66.12 ರಷ್ಟು ಮತದಾನವಾಗಿದೆ.

**59-ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ:** 231 ಮತಗಟ್ಟೆ, 1,05,516 ಪುರುಷ, 1,10,302 ಮಹಿಳೆಯರು, 8 ಇತರೆ ಸೇರಿ ಒಟ್ಟು 2,15,826 ಮತದಾರರಿದ್ದು, ಇದರಲ್ಲಿ 69,930 ಪುರುಷರು, 69,615 ಮಹಿಳೆಯರು, 2 ಇತರೆ ಒಳಗೊಂಡಂತೆ ಒಟ್ಟು 1,39,547 ಮತದಾರರು ಮತದಾನ ಮಾಡಿ ಶೇ.64.66 ರಷ್ಟು ಮತದಾನವಾಗಿದೆ.

**ಬಳ್ಳಾರಿ ಜಿಲ್ಲೆಯ 92-ಸಿರಗುಪ್ಪ ವಿಧಾನಸಭಾ ಕ್ಷೇತ್ರದಲ್ಲಿ:** 228 ಮತಗಟ್ಟೆಗಳಲ್ಲಿ 1,10,267 ಪುರುಷರು, 1,15,018 ಮಹಿಳೆಯರು ಹಾಗೂ 44 ಇತರೆ ಸೇರಿ ಒಟ್ಟು 2,25,329 ಮತದಾರರಿದ್ದಾರೆ. ಈ ಪೈಕಿ 80,264 ಪುರುಷರು, 80,118 ಮಹಿಳೆಯರು, 18 ಇತರೆ ಒಳಗೊಂಡಂತೆ ಒಟ್ಟು 1,60,400 ಮತದಾರರು ಮತದಾನ ಮಾಡಿ ಶೇ.71.18 ರಷ್ಟು ಮತದಾನವಾಗಿದೆ.

## ವಿಜ್ಞಾನ

### ಮಳೆಗಾಲದಲ್ಲಿ ಕುಡಿಯುವ ನೀರನ್ನು ಏಕೆ ಕುದಿಸುತ್ತಾರೆ?

■ ಆರ್.ಬಿ.ಗುರುಬಸವರಾಜ

ಮಳೆಗಾಲದ ಒಂದು ದಿನ ಶಾಲೆಯಿಂದ ಮನೆಗೆ ಹಿಂದಿರುಗಿದ ನಂದಿನಿ 'ಆಕ್ಸಿ,,, ಆಕ್ಸಿ,,,,' ಎನ್ನುತ್ತಾ ಸೀನುತ್ತಲೇ ಬಂದಳು. ಒಳಬಂದವಳು ಕೈಕಾಲು ಮುಖ ತೊಳೆದುಕೊಂಡಳು. ನಂತರ ಬಿಸಿ ಬಿಸಿ ಕಾಫಿ ಹೀರಿ ಕುಳಿತಳು. ಸ್ವಲ್ಪ ನಿರಾಳ ಎನಿಸಿತು. ಸ್ವಲ್ಪ ಸಮಯದ ನಂತರ ತಂದೆಯೂ ಬಂದರು. ಕೈಕಾಲು ಮುಖ ತೊಳೆದ ನಂತರ ಕುಡಿಯಲು ಬಿಸಿ ನೀರು ಕೇಳಿದರು. ತಾಯಿ ನೀರನ್ನು ಕುದಿಸಿ ಆರಿಸಿ ಕೊಟ್ಟಳು. ಇದನ್ನೆಲ್ಲಾ ನೋಡುತ್ತಾ ಕುಳಿತಿದ್ದ ನಂದಿನಿ "ಯಾಕಪ್ಪಾ ಬಿಸಿ ನೀರು ಕುಡಿದೆ?" ಎಂದಳು. 'ಮಳೆಗಾಲವಾದ್ದರಿಂದ ಬಿಸಿ ನೀರು ಕುಡಿದೆ' ಎಂದರು ತಂದೆ. "ಮಳೆಗಾಲದಲ್ಲಿ ಏಕೆ ನೀರನ್ನು ಕುದಿಸಿ ಕುಡಿಯಬೇಕು?" ಎಂದು ಮತ್ತೊಂದು ಪ್ರಶ್ನೆ ಕೇಳಿದಳು. ತಂದೆ ಸಮಾದಾನದಿಂದ ಅವಳ ಪ್ರಶ್ನೆಗೆ ಉತ್ತರಿಸಿದರು.



ಕುಡಿಯುವ ನೀರನ್ನು ಕುದಿಸಿ ಶುದ್ಧೀಕರಿಸುವುದು ಒಂದು ಸಾಮಾನ್ಯ ವಿಧಾನವಾಗಿದೆ. ಕುದಿಸುವುದರಿಂದ ನೀರಿನಲ್ಲಿ ಇರಬಹುದಾದ ಹಾನಿಕಾರಕ ಬ್ಯಾಕ್ಟೀರಿಯಾಗಳು, ವೈರಸ್‌ಗಳು ಮತ್ತು ಇತರ ರೋಗಕಾರಕಗಳನ್ನು ಕೊಲ್ಲುತ್ತದೆ. ಮಳೆಗಾಲದಲ್ಲಿ ನೆಲ ಮತ್ತು ಇತರ ಮೂಲಗಳಿಂದ ಹರಿದು ಬರುವ ನೀರು ಕಲುಷಿತಗೊಳ್ಳುವ ಅಪಾಯ ಹೆಚ್ಚಾಗಿರುತ್ತದೆ. ಈ ಹರಿವು ಹಾನಿಕಾರಕ ಸೂಕ್ಷ್ಮಾಣುಜೀವಿಗಳು, ರಾಸಾಯನಿಕಗಳು ಮತ್ತು ಇತರ ಮಾಲಿನ್ಯಕಾರಕಗಳನ್ನು ಒಳಗೊಂಡಿರುತ್ತದೆ. ಅಂತಹ ನೀರನ್ನು ಬಳಸುವುದರಿಂದ ರೋಗಗಳು ಬರಬಹುದು. ಜಲ ಮೂಲದಿಂದ ಬರುವ ರೋಗಗಳ ಮುಂಜಾಗ್ರತಾ ಕ್ರಮವಾಗಿ ನೀರನ್ನು ಕುದಿಸಿ ಕುಡಿಯುವುದು ವಾಡಿಕೆ.

ಸಾಮಾನ್ಯವಾಗಿ ಮಳೆಗಾಲದಲ್ಲಿ ನೀರಿನ ಸಂಸ್ಕರಣೆ ಮತ್ತು ವಿತರಣಾ ವ್ಯವಸ್ಥೆಗಳು ಹದಗೆಡುತ್ತವೆ. ನದಿಗಳು, ಸರೋವರಗಳು ಮತ್ತು ಬಾವಿಗಳಂತಹ ನೀರಿನ ಮೂಲಗಳು ಬ್ಯಾಕ್ಟೀರಿಯಾ, ವೈರಸ್‌ಗಳು ಮತ್ತು ಪರಾವಲಂಬಿಗಳಿಂದ ಕಲುಷಿತಗೊಳ್ಳುತ್ತವೆ. ಕಲುಷಿತ ನೀರಿನಿಂದ ಅತಿಸಾರ, ಕಾಲರಾ ಮತ್ತು ಟೈಫಾಯಿಡ್ ಜ್ವರದಂತಹ ಕಾಯಿಲೆಗಳಿಗೆ ತುತ್ತಾಗಬಹುದು. ಈ ಸಮಯದಲ್ಲಿ ಕುಡಿಯುವ ನೀರನ್ನು ಕುದಿಸುವ ಮೂಲಕ ನೀರಿನ ವಿಶ್ವಾಸಾರ್ಹತೆ ಮತ್ತು ಸುರಕ್ಷಿತತೆಯನ್ನು ಉಳಿಸಿಕೊಳ್ಳಬಹುದು. ಕುದಿಯುವ ನೀರು ಹಾನಿಕಾರಕ ಸೂಕ್ಷ್ಮಾಣು ಜೀವಿಗಳನ್ನು ಕೊಲ್ಲುತ್ತದೆ. ಅಂತೆಯೇ ನೀರನ್ನು ಕುದಿಸುವುದು ಕೆಲವು ಕಲ್ಮಶಗಳು ಮತ್ತು ವಿಷಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಕುಡಿಯಲು ಸುರಕ್ಷಿತವಾಗಿಸುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ಮಳೆಗಾಲದಲ್ಲಿ ಕುಡಿಯುವ ನೀರನ್ನು ಕುದಿಸುತ್ತಾರೆ.




## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**09–05–2024 – ಗುರುವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಕೃತ್ತಿಕಾ |
| ಯೋಗ | : ಶೋಭನ |
| ಕರಣ | : ಭವ |
| ಸೂರ್ಯೋದಯ | : 05:49:54 |
| ಸೂರ್ಯಾಸ್ತ | : 18:57:06 |
| ರಾಹು | : 14:02–15:40 |
| ಯಮಘಂಡ | : 05:50–07:28 |
| ಗುಳಿಕ | : 09:07–10:45 |

## ತುಂಗಭದ್ರಾ ನೀರಿನ ಮಟ್ಟ



**ಬುಧವಾರ : 08–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.74 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.470 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1575.72 ಅಡಿ |
| ಒಳ ಹರಿವು | 828 ಕ್ಯುಸೆಕ್ |
| ಹೊರ ಹರಿವು | 107 ಕ್ಯುಸೆಕ್ |
| ಸಾಮರ್ಥ್ಯ | 2.731 ಟಿಎಂಸಿ |

## ಸೊನ್ನದ ಚೌಡಮ್ಮ ನಿಧನ

**ಹಗರಿಬೊಮ್ಮನಹಳ್ಳಿ:**
ತಾಲೂಕಿನ ಸೊನ್ನ ಗ್ರಾಮದ ಚೌಡಮ್ಮ (75) ಬುಧವಾರ ಬೆಳಗ್ಗೆ ನಿಧನರಾಗಿದ್ದಾರೆ. ಇವರ ಪತಿ ಟಿ.ದೊಡ್ಡನಿಂಗಪ್ಪ ಹಗರಿಬೊಮ್ಮನಹಳ್ಳಿ ಕೃಷಿ ಮಾರುಕಟ್ಟೆ ಸಮಿತಿ ಸದಸ್ಯರಾಗಿದ್ದರು. ಮಗ ಪುತ್ರ ಕಾಂಗ್ರೆಸ್‌ನ ಒಬಿಸಿ ಜಿಲ್ಲಾ ಅಧ್ಯಕ್ಷ ಟಿ. ಮಹೇಶ್ ಸೇರಿದಂತೆ 7ಜನ ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಹೊಂದಿದ್ದರು. ಗ್ರಾಮದಲ್ಲಿ ಸಂಜೆ ಮೃತರ ಅಂತ್ಯಕ್ರಿಯೆ ಜರುಗಿತು.



## ಮೇ 27 ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**
ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಮೇ 27 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬಳ್ಳಾರಿ ತಾಲ್ಲೂಕಿನ ಕುಡುತಿನಿ ಪಟ್ಟದ ಎಸಿಸಿ ಸಿಮೆಂಟ್ ಕಾರ್ಖಾನೆಯ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಗೃಹಲಕ್ಷ್ಮೀಯರಿಗಿಂತ ಅಧಿಕ ಪುರುಷರಿಂದ ಮತದಾನ । 8973 ಪುರುಷರ ಮತಗಳೆ ನಿರ್ಣಾಯಕ

# ಬಳ್ಳಾರಿ ಲೋಕಸಭೆ ಕ್ಷೇತ್ರಗಳಲ್ಲಿ ಈಬಾರಿ ದಾಖಲೆ ಮತದಾನ

**ಹಂಪಿ ಟೈಮ್ಸ್ ಬಳ್ಳಾರಿ:**
ಬಳ್ಳಾರಿ ಲೋಕಸಭೆ ವ್ಯಾಪ್ತಿಯ 08 ವಿಧಾನಸಭಾ ಕ್ಷೇತ್ರಗಳಲ್ಲಿ ಮೇ 07 ರಂದು ಶಾಂತಿಯುತವಾಗಿ ಮತದಾನ ನಡೆದಿದ್ದು, ಅಂತಿಮ ವರದಿಯಂತೆ ಒಟ್ಟು ಶೇ.73.59 ರಷ್ಟು ಮತದಾನವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.
ಬಳ್ಳಾರಿ ಲೋಕಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 1952 ರಿಂದ ಇದುವರೆಗೂ ನಡೆದ ಲೋಕಸಭೆ ಚುನಾವಣೆಗಳಲ್ಲಿ ಇದು ದಾಖಲೆಯ ಮತದಾನ ಪ್ರಮಾಣವಾಗಿದೆ. 10 ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆಯಲ್ಲಿ ಭದ್ರವಾಗಿದ್ದು, ಏನೇ ಲೆಕ್ಕಾಚಾರಗಳನ್ನು ಹಾಕಿದರೂ, ಜೂನ್ 4 ರಂದು ನಗರದ ರಾವ್ ಬಹದ್ದೂರ್ ವೈ.ಮಹಾಬಲೇಶ್ವರ ತಾಂತ್ರಿಕ ಇಂಜಿನಿಯರ್ ಮಹಾವಿದ್ಯಾಲಯದಲ್ಲಿ ನಡೆಯುವ ಮತ ಎಣಿಕೆ ದಿನದಂದು 10 ಅಭ್ಯರ್ಥಿಗಳ ಭವಿಷ್ಯ ಹೊರಬೀಳಲಿದ್ದು, ಗೆಲುವಿನ ಹಾರ ಯೋರ ಕೊರಳಿಗೆ ಕಾದು ನೋಡಬೇಕಿದೆ.

**ಬಳ್ಳಾರಿ ಲೋಕಸಭಾ ಕ್ಷೇತ್ರವಾರು ಮತದಾನದ ಪಕ್ಷಿನೋಟ**

| ಕ್ಷೇತ್ರ | ಪುರುಷರು | ಮಹಿಳೆಯರು | ತೃತೀಯ ಲಿಂಗಿಗಳು | ಮತಗಟ್ಟೆ | ಒಟ್ಟು ಮತದಾನ | ಒಟ್ಟು ಮತದಾರರ ಸಂಖ್ಯೆ | ಶೇಕಡ ಮತದಾನ |
|---|---|---|---|---|---|---|---|
| 88 - ಹಡಗಲಿ | 75,892 | 71,796 | 1 | 218 | 1,47,689 | 1,96,858 | 75.02 % |
| 89 - ಹ.ಬೊ.ಹಳ್ಳಿ | 94,275 | 91,107 | 13 | 254 | 1,85,395 | 2,37,811 | 77.96 % |
| 90 - ವಿಜಯನಗರ | 90,640 | 92,477 | 13 | 259 | 1,83,130 | 2,60,197 | 70.38 % |
| 91 - ಕಂಪ್ಲಿ | 88,574 | 88,220 | 18 | 242 | 1,76,812 | 2,23,993 | 78.94 % |
| 93 - ಬಳ್ಳಾರಿ | 89,375 | 90,908 | 18 | 235 | 1,80,302 | 2,50,112 | 72.09 % |
| 94 - ಬಳ್ಳಾರಿ ನಗರ | 87,486 | 90,122 | 13 | 261 | 1,77,621 | 2,72,673 | 65.14 % |
| 95 - ಸಂಡೂರು | 89,225 | 85,449 | 7 | 253 | 1,74,681 | 2,32,400 | 75.16 % |
| 96 - ಕೂಡ್ಲಿಗಿ | 82251 | 78666 | 6 | 250 | 1,60,923 | 2,09,996 | 76.63 % |
| ಒಟ್ಟು | 6,97,718 | 6,88,745 | 90 | 1,972 | 13,86,553 | 18,84,040 | 73.59 % |

# ಜ್ಞಾನಸುಧಾದಿಂದ ಉಚಿತ ನೀಟ್ ಲಾಂಗ್ ಟರ್ಮ್ ತರಬೇತಿ

### ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಸುಧಾಕರ್ ಶೆಟ್ಟಿ ಹೇಳಿಕೆ । ಅರ್ಹ ವಿದ್ಯಾರ್ಥಿಗಳಿಗೆ ಅನ್ವಯ

**ಹಂಪಿ ಟೈಮ್ಸ್ ಉಡುಪಿ**
ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನೀಟ್, ಜೆ.ಇ.ಇ, ಕೆ.ಸಿ.ಇ.ಟಿ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಮೋಘ ಸಾಧನೆ ಮಾಡಿರುವ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳಲ್ಲಿ, ಇದೀಗ ನೀಟ್ 2024ರ ಪರೀಕ್ಷೆ ಬರೆದು, ಎಂ.ಬಿ.ಬಿ.ಎಸ್ ಸೀಟು ಪಡೆಯುವಲ್ಲಿ ವಿಫಲರಾದ ಆಯ್ದ ಅರ್ಹ ವಿದ್ಯಾರ್ಥಿಗಳಿಗೆ ಒಂದು ವರ್ಷದ ಸಂಪೂರ್ಣ ಉಚಿತ ಅಥವಾ ಶೇ.50 ಶುಲ್ಕ ವಿನಾಯಿತಿಯೊಂದಿಗೆ ನೀಟ್ ಲಾಂಗ್ ಟರ್ಮ್ ತರಬೇತಿಯನ್ನು ನೀಡುವುದಾಗಿ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ.ಸುಧಾಕರ್ ಶೆಟ್ಟಿ ಅವರು ತಿಳಿಸಿದ್ದಾರೆ.



ನೀಟ್ 2022ರಲ್ಲಿ 107 ವಿದ್ಯಾರ್ಥಿಗಳು ಹಾಗೂ ನೀಟ್ 2023ರಲ್ಲಿ 108 ವಿದ್ಯಾರ್ಥಿಗಳು ರಾಜ್ಯದ ವಿವಿಧ ಮೆಡಿಕಲ್ ಕಾಲೇಜುಗಳಲ್ಲಿ ಉಚಿತ ಎಂ.ಬಿ.ಬಿ.ಎಸ್. ಸೀಟು ಪಡೆದಿರುತ್ತಾರೆ. (ಪ್ರತಿ 4 ವಿದ್ಯಾರ್ಥಿಗಳಲ್ಲಿ ಒಬ್ಬರಂತೆ). ನೀಟ್ ಲಾಂಗ್‌ಟರ್ಮ್‌ಗೆ ದಾಖಲಾತಿ ಬಯಸುವ ಆಸಕ್ತ ವಿದ್ಯಾರ್ಥಿಗಳು www.jnanasudha.com ಗೆ ಲಾಗಿನ್ ಆಗಿ ಹೆಸರು ನೊಂದಾಯಿಸಿಕೊಳ್ಳ ಬಹುದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ದೂರವಾಣಿ ಸಂಖ್ಯೆ ಮೊ: 8762295555, ಮೊ: 8147454891 ಸಂಪರ್ಕಿಸಬಹುದು. ಮೊದಲು ನೊಂದಾಯಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದ್ದಾರೆ.



# ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

### ಅರ್ಜಿ ಸಲ್ಲಿಸಲು ಮೇ 21 ಕೊನೆಯ ದಿನ । ವಾರ್ಷಿಕ ಆದಾಯ ರೂ.2.50 ಲಕ್ಷದೊಳಗಿರಬೇಕು

**ಹಂಪಿ ಟೈಮ್ಸ್ ಕೊಪ್ಪಳ**
ಸಮಾಜ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ವಿವಿಧ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯ ಮೂಲಕ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಾದ ಕುಕನೂರಿನ ವಿದ್ಯಾಶ್ರೀ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕೊಪ್ಪಳ ನಗರದ ಹೊಸಪೇಟೆ ರಸ್ತೆಯ ಎಸ್.ಎಫ್.ಎಸ್ ಪ್ರೌಢಶಾಲೆ ಹಾಗೂ ಲಯನ್ಸ್ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ, ಗಂಗಾವತಿಯ ಬೇಥಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಭಾಗ್ಯನಗರದ ಜ್ಞಾನಬಂಧು ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಕುಷ್ಟಗಿಯ ವಿಜಯ ಚಂದ್ರಶೇಖರ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಅವಕಾಶ ಕಲ್ಪಿಸಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ್ದು, ತಹಶೀಲ್ದಾರರವರಿಂದ ಪಡೆದ ಆರ್.ಡಿ ಸಂಖ್ಯೆ ಹೊಂದಿರುವ ಚಾಲ್ತಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು. ವಿದ್ಯಾರ್ಥಿ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷದೊಳಗಿರಬೇಕು.

ವಿದ್ಯಾರ್ಥಿಯು 2023–24ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಶೇ. 60 ಅಂಕ ಪಡೆದಿರಬೇಕು. ಆಯ್ಕೆಯಾಗುವ ವಿದ್ಯಾರ್ಥಿಗಳಲ್ಲಿ ಬಾಲಕಿಯರಿಗೆ ಶೇ.50 ರಷ್ಟು ಮೀಸಲಾತಿಯನ್ನು ನೀಡಲಾಗುವುದು. ಅರ್ಜಿ ನಮೂನೆಯಲ್ಲಿ ನಮೂದಿಸಿದ 15 ವಿಧದ ವಿಶೇಷ ವರ್ಗಕ್ಕೆ ಸೇರಿದ ಮಕ್ಕಳಿಗೆ ಮೊದಲನೇ ಆದ್ಯತೆ ನೀಡಲಾಗುವುದು. ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಇರುವುದಿಲ್ಲ.

ಅರ್ಜಿ ಸಲ್ಲಿಸಲು ಮೇ 21 ಕೊನೆಯ ದಿನವಾಗಿದ್ದು, ಅಗತ್ಯ ದಾಖಲೆಗಳೊಂದಿಗೆ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಕಛೇರಿಗೆ ಅರ್ಜಿ ಸಲ್ಲಿಸಿ ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಹಾಗೂ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಮೇ 19ಕ್ಕೆ ಪರೀಕ್ಷೆ: ಪ್ರವೇಶ ಪತ್ರ ಪಡೆಯಲು ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಶೈಕ್ಷಣಿಕ ವರ್ಷಕ್ಕೆ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ (ಆಂಗ್ಲ ಮಾಧ್ಯಮ) ಶಾಲೆಗಳ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ (ಸಿ.ಬಿ.ಎಸ್.ಇ) ಶಾಲೆಯ 6ನೇ ತರಗತಿಯ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಮೇ 19ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಪ್ರವೇಶ ಪರೀಕ್ಷೆ ನಡೆಯಲಿದೆ.
ಆದ್ದರಿಂದ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ವಸತಿ ಶಾಲೆಗಳ ಪ್ರಾಂಶುಪಾಲರಿಂದ ಪ್ರವೇಶ ಪತ್ರ ಪಡೆದು ಪರೀಕ್ಷೆಗೆ ಹಾಜರಾಗಲು ಸೂಚಿಸಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೇರಿಗೆ ಬಾಳೆಹಣ್ಣು, ಉತ್ತುತ್ತಿ ಎಸೆಯುವುದು ನಿಷೇಧ

**ಹಂಪಿ ಟೈಮ್ಸ್ ಹೊಸಪೇಟೆ:**
ತಾಲೂಕಿನ ಕಮಲಾಪುರ ಪಟ್ಟಣದ ಶ್ರೀ ನಗರೇಶ್ವರ ಸ್ವಾಮಿಯ ರಥೋತ್ಸವವು ಮೇ 10 ರಂದು ಸಂಜೆ 4ಕ್ಕೆ ಅಕ್ಷಯ ತೃತಿಯ ಶ್ರೀಬಸವಜಯಂತಿಯಂದು ನೆರವೇರಲಿದ್ದು, ತೇರಿಗೆ ಬಾಳೆಹಣ್ಣು, ಉತ್ತುತ್ತಿ ಎಸೆಯುವುದು ಮತ್ತು ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಕಮಲಾಪುರ ಆರ್ಯವೈಶ್ಯ ಸಂಘದ ಅಧ್ಯಕ್ಷ ಜೂಟೂರು ನಾಗೇಂದ್ರಪ್ಪ ಶೆಟ್ಟಿ ತಿಳಿಸಿದ್ದಾರೆ.
ತೇರಿಗೆ ಬಾಳೆ ಹಣ್ಣು ಎಸೆಯುವುದರಿಂದ ಭಕ್ತರು, ಸನ್ನೆಹಾಕುವವರಿಗೆ ಸೇರಿದಂತೆ ಅನೇಕರಿಗೆ ತಾಗಿ, ತುಳಿದು ಅನೇಕ ಕಡೆ ಅವಘಡಗಳು ಸಂಭವಿಸಿದ್ದರಿಂದ, ಕಮಲಾಪುರ ಶ್ರೀನಗರೇಶ್ವರ ಸ್ವಾಮಿ ರಥೋತ್ಸವದಲ್ಲಿ ತೇರಿಗೆ ಬಾಳೆಹಣ್ಣು, ಉತ್ತತ್ತಿ ಎಸೆಯುವುದನ್ನು ಭಕ್ತರ ಹಿತದೃಷ್ಠಿಯಿಂದ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಬಾಳೆಹಣ್ಣು ಮಾರಾಟ ನಿಷೇಧವಿದ್ದು, ಪ್ರಕಟಣೆಯನ್ನು ನಿರ್ಲಕ್ಷಿಸಿ ಬಾಳೆಹಣ್ಣು ಉತ್ತುತ್ತಿ ಮಾರಾಟದಲ್ಲಿ ತೊಡಗಿದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಜನರ ಸುರಕ್ಷತೆಯ ದೃಷ್ಟಿಯಿಂದ ರಥೋತ್ಸವ ಸಮಿತಿಯಲ್ಲಿ ತೆಗೆದುಕೊಂಡ ನಿರ್ದಾರವಾಗಿದ್ದು, ಭಕ್ತರು ಸಾರ್ವಜನಿಕರು ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಮೇ 14 ರಂದು ಭಗೀರಥ ಮಹರ್ಷಿ ಜಯಂತಿ ಸರಳ ಆಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮೇ 14 ರಂದು ನಗರದ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪೂಜೆಯನ್ನು ನೆರವೇರಿಸುವುದರ ಮೂಲಕ ಶ್ರೀ ಭಗೀರಥ ಜಯಂತಿಯನ್ನು ಸರಳವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್ ಅವರು ತಿಳಿಸಿದ್ದಾರೆ.
ಲೋಕಸಭಾ ಚುನಾವಣೆ 2024ರ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ




- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA